ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

12 ಮಾರ್ಚ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 2 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಮಾರ್ಚ್ 28ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ವಿರುದ್ಧ ಐಪಿಎಲ್‌ನ ಉದ್ಘಾಟನಾ ಪಂದ್ಯ ನಡೆಯಲಿದೆ.



ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆಯಿಲ್ಲ ▸▸ 2

ಭಾರತಕ್ಕೆ ಟಿ-20 ವಿಶ್ವಕಪ್ ಕ್ರಿಕೆಟ್ ಆಡಲು ಬಂದಿದ್ದ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ಆಟಗಾರರು ತಮ್ಮ ತವರಿಗೆ ತೆರಳಲು ವಿಳಂಬವಾಗಿರುವುದರ ಕುರಿತು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸಹಾನುಭೂತಿ ವ್ಯಕ್ತಪಡಿಸಿದೆ.



ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸೋಲು ▸▸ 4

# ಹೊರ್ಮುಜ್ ಜಲಸಂಧಿ ಬಂದ್: ಸಂಕಷ್ಟ ಅಧಿಕ

## ವಿಶ್ವಸಂಸ್ಥೆಯ ಅಂಗಸಂಸ್ಥೆ ಯುಎನ್‌ಸಿಟಿಎಡಿ ಎಚ್ಚರಿಕೆ | ರಷ್ಯಾ-ಭಾರತ ಚರ್ಚೆ

• ಪ್ರಜೋದಯ ವರದಿ

**ನವದೆಹಲಿ:** ಒಂದು ವೇಳೆ ಹೊರ್ಮುಜ್ ಜಲಸಂಧಿಯನ್ನು ಮುಚ್ಚಿದರೆ ಆಹಾರ ಪದಾರ್ಥ, ಜೀವನ ನಿರ್ವಹಣಾ ವೆಚ್ಚವು ಏರಿಕೆಯಾಗಲಿದೆ. ಜೊತೆಗೆ ಇಂಧನ ಪೂರೈಕೆಗೆ ಸಂಬಂಧಿಸಿ ಏಷ್ಯಾದ ದೇಶಗಳೇ ಹೆಚ್ಚಿನ ಸಂಕಷ್ಟಕ್ಕೆ ಒಳಗಾಗುತ್ತವೆಂದು ವ್ಯಾಪಾರ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಅಂಗಸಂಸ್ಥೆ ಯುಎನ್ ಸಿಟಿಎಡಿ ಎಚ್ಚರಿಕೆ ನೀಡಿದೆ.

ಜಲಸಂಧಿ ಮುಚ್ಚುವುದರಿಂದ ಜಗತ್ತಿನ ವ್ಯಾಪಾರ ಮತ್ತು ಅಭಿವೃದ್ಧಿಯ ಮೇಲಾಗುವ ಪರಿಣಾಮಗಳ ಕುರಿತು ಯುಎನ್ ಸಿಟಿಎಡಿ ವರದಿ ಬಿಡುಗಡೆ ಮಾಡಿದೆ. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೋನಿಯೊ ಗುಟೆರಸ್ ಅವರ ವಕ್ತಾರ ಸ್ಟೀಫನ್ ಡುಜಾರಿಕ್ ಅವರು ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿ, ಯುದ್ಧದ ಪರಿಣಾಮಗಳು ದೀರ್ಘಾವಧಿಯದ್ದಾಗಿರುತ್ತವೆ. ತೈಲ ಬೆಲೆ ಏರಿಕೆಯಾದರೆ ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುತ್ತದೆ. ಅಡುಗೆ ಅನಿಲ ಬೆಲೆ ಏರಿಕೆಯಾದರೆ, ರಸಗೊಬ್ಬರಗಳ ಬೆಲೆಯೂ ಏರಿಕೆಯಾ ಗುತ್ತದೆಂದು ಹೇಳಿದರು.



ಏಷ್ಯಾದ ದೇಶಗಳು ಮಾತ್ರವಲ್ಲ ಇಡೀ ಜಗತ್ತಿನ ಪೂರೈಕೆ ಸರಪಳಿ ಮೇಲೆಯೇ ತೀವ್ರ ಪರಿಣಾಮ ಉಂಟಾಗಲಿದೆ. ಸರಕು ಸಾಗಾಟ ದರ, ಹಡಗಿನಲ್ಲಿ ಬಳಸುವ ಇಂಧನ ಮತ್ತು ವಿಮೆ ಕಂತುಗಳು ಅಲ್ಲದೆ ಇಂಧನ, ರಸಗೊಬ್ಬರ ಮತ್ತು ಸಂಚಾರದ ವೆಚ್ಚ ಏರಿಯಾದರೆ ಜನರ ಜೀವನ ನಿರ್ವಹಣಾ ವೆಚ್ಚ ಅಧಿಕವಾಗಲಿದೆ. ಅದರಿಂದ ಸಮಾಜದ ಬಡಜನರು ಸಂಕಷ್ಟಕ್ಕೆ ಒಳಗಾಗುತ್ತಾರೆಂದರು.

**ರಷ್ಯಾ ಸಚಿವರೊಂದಿಗೆ ಮಾತುಕತೆ**

ಪಶ್ಚಿಮ ಏಷ್ಯಾ ಸಂಘರ್ಷ ಇಂಧನ ಪೂರೈಕೆಯನ್ನು ಅಸ್ಥಿರಗೊಳಿಸುತ್ತಿರುವುದರಿಂದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ರಷ್ಯಾದ ಸಹವರ್ತಿ (ರಷ್ಯಾ ವಿದೇಶಾಂಗ ಸಚಿವ) ಸೆರ್ಗೆಯ್ ಲಾವ್ರೊವ್ ಮತ್ತು ಯುರೋಪಿಯನ್ ಒಕ್ಕೂಟದ ವಿದೇಶಾಂಗ ನೀತಿ ಮುಖ್ಯಸ್ಥೆ ಕಾಜಾ ಕಲ್ಲಾಸ್ ಅವರೊಂದಿಗೆ ಮಾತನಾಡಿ, ಬಿಕ್ಕಟ್ಟಿನ ಪರಿಣಾಮವನ್ನು ನಿಬಾಯಿಸುವತ್ತ ಗಮನಹರಿಸಿದ್ದಾರೆ. ಪರ್ಷಿಯನ್ ಕೊಲ್ಲಿ ಮತ್ತು ಓಮನ್ ಕೊಲ್ಲಿ ನಡುವಿನ ಕಿರಿದಾದ ಹಡಗು ಮಾರ್ಗವಾದ ಹಾರ್ಮುಜ್ ಜಲಸಂಧಿಯನ್ನು ಇರಾನ್ ನಿರ್ಬಂಧಿಸಿದ ನಂತರ ಜಾಗತಿಕ ತೈಲ ಮತ್ತು ಅನಿಲ ಬೆಲೆಗಳು ಏರಿಕೆಯಾಗಿವೆ. ಇದು ಜಾಗತಿಕ ತೈಲ ಮತ್ತು ಎಲ್‌ಎನ್‌ಜಿ (ದ್ರವೀಕೃತ ನೈಸರ್ಗಿಕ ಅನಿಲ) ಸರಿಸುಮಾರು 20 ಪ್ರತಿಶತವನ್ನು ನಿರ್ವಹಿಸುತ್ತದೆ.

» ನಾಲ್ಕನೇ ಪುಟದಲ್ಲಿ

**ನಾವು ಹೇಳಿದಂತೆ ಭಾರತ ಕೇಳುತ್ತದೆ: ಶ್ವೇತಭವನ**

ಇರಾನ್ ಜೊತೆಗಿನ ಸಂಘರ್ಷದ ಕಾರಣ ಇಂಧನ ಪೂರೈಕೆಯು ಸುಗಮವಾಗಬೇಕೆಂಬುದು ನಮ್ಮ ಉದ್ದೇಶ. ಭಾರತವು ನಾವು ಹೇಳಿದಂತೆ ಕೇಳುತ್ತದೆ. ರಷ್ಯಾದಿಂದ ತೈಲ ಖರೀದಿಸಬೇಡಿ ಎಂದು ನಾವು ಹೇಳಿದ್ದೆವು. ಅದನ್ನು ಅವರು ಪಾಲಿಸಿದ್ದರು. ಆದ್ದರಿಂದಲೇ ಅದಕ್ಕೆ ನಾವು ರಷ್ಯಾ ದಿಂದ ತೈಲ ಖರೀದಿಸಲು ಅನುಮತಿ ನೀಡಿದ್ದೇವೆಂದು ಶ್ವೇತಭವನ ಹೇಳಿದೆ. ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೋಲಿನ್ ಲೀವಿಟ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಷ್ಯಾದ ತೈಲ ತುಂಬಿದ ಹಡಗುಗಳು ಈಗಾಗಲೇ ಸಮುದ್ರದಲ್ಲಿರುವುದರಿಂದ ಈ ತೈಲವನ್ನು ಪಡೆದುಕೊಳ್ಳಲು ನಾವು ಭಾರತಕ್ಕೆ ತಾತ್ಕಾಲಿಕವಾದ ಅನುಮತಿ ನೀಡಿದ್ದೇವೆ. ಹೊರ್ಮುಜ್ ಜಲಸಂಧಿಯ ಮೂಲಕ ತೈಲ ಸಾಗಣೆ ಆಗದಿರುವುದರಿಂದ ತೈಲ ದರದಲ್ಲಿ ಏರಿಕೆಯಾಗಿದೆ. ಈ ಎಲ್ಲವನ್ನೂ ನಿರ್ವಹಿಸಲು ನಾವು ಭಾರತಕ್ಕೆ ಅಲ್ಪಾವಧಿ ಅವಕಾಶ ನೀಡಿದ್ದೇವೆ. ತೈಲ ತುಂಬಿದ ಹಡಗುಗಳು ರಷ್ಯಾದಿಂದ ಈಗಾಗಲೇ ಹೊರಟು ಸಮುದ್ರದಲ್ಲಿ ಹಾಗೆಯೇ ನಿಂತಿವೆ. ಚೀನಾ ಅವುಗಳನ್ನು ದಾಸ್ತಾನು ಮಾಡಿಕೊಳ್ಳುತ್ತದೆ. ಆದ್ದರಿಂದ ನಿಮ್ಮ ತೈಲ ಸಂಸ್ಕರಣಾ ಘಟಕಗಳಿಗೆ ಇವನ್ನು ತುಂಬಿಕೊಳ್ಳಿ ಎಂದು ನಮ್ಮ ಸ್ನೇಹಿತ ಭಾರತಕ್ಕೆ ಹೇಳಿದ್ದೇವೆಂದು ಅಮೇರಿಕಾ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

# ವಿಮಾನ ನಿಲ್ದಾಣ: ಭೂ ಪರಿಹಾರಕ್ಕೆ ತ್ವರಿತ ಕ್ರಮ

• ಪ್ರಜೋದಯ ವರದಿ

**ಹಾಸನ:** ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಪರಿಹಾರ ಬಿಡುಗಡೆಗೆ ಅಗತ್ಯ ಕ್ರಮ ವಹಿಸಲಾಗುವುದೆಂದು ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಕಾರ್ಯ ದರ್ಶಿ ಹಾಗು ಹಣಕಾಸು ಇಲಾಖೆಯ ಹಣಕಾಸು ಸುಧಾರಣೆಯ ಕಾರ್ಯದರ್ಶಿ ಡಾ.ಆರ್. ವಿಶಾಲ್ ಅವರು ತಿಳಿಸಿದರು.

ಬೂವನಹಳ್ಳಿ ವಿಮಾನ ನಿಲ್ದಾಣಕ್ಕೆ ಬುಧವಾರ ಭೇಟಿ ನೀಡಿ ನಂತರ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಆದ್ಯತೆ ಅನುಸಾರ ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಕಾಮಗಾರಿ ಪೂರ್ಣಗೊಳಿಸಲು ಎದುರಾಗಿಸುವ ಸಮಸ್ಯೆಗಳ ನಿವಾರಣೆಗೆ ಒತ್ತು ನೀಡಬೇಕೆಂದರು.


ವಿಮಾನ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ, ಸರ್ವೀಸ್ ರಸ್ತೆ ನಿರ್ಮಾಣ, ರೈತರಿಗೆ ಸಮಸ್ಯೆ ಹಾಗು ನಗರಾಭಿವೃದ್ಧಿ ಪ್ರಾಧಿಕಾರದಿಂದ ನೀರಿನ ಸಂಪರ್ಕ ಕಲ್ಪಿಸುವ ಕುರಿತು ಹಾಗು ಇನ್ನಿತರ ವಿಷಯಗಳ ಸಂಬಂಧಿತ ಸೂಕ್ತ ನಿರ್ದೇಶನ ನೀಡಿದರು.



ವ' ಶ' ಪ' ಡಿ ಸಿ ಕ' ೊ ಂ ಡಿ ರ' ು ವ' ಜಮೀನುಗಳಲ್ಲಿ ಹಾದು ಹೋಗಿರುವ ಹೈ ಟೆನ್ಷನ್ ವಿದ್ಯುತ್ ಲೈನ್ ಸ್ಥಳಾಂತರಕ್ಕೆ ಅನುದಾನ ಬಿಡುಗಡೆ ಕ್ರಮ ವಹಿಸಲಾಗುವುದು. ನಂತರ ಸರ್ವೀಸ್ ರಸ್ತೆ ನಿರ್ಮಾಣದ ಕುರಿತು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಖುಷ್ಬು ಗೋಯೇಲ್ ಚೌದರಿ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್ ಮತ್ತಿತರರಿದ್ದರು.

# ಚಲಿಸುತ್ತಿದ್ದ ಬೈಕ್‌ನಲ್ಲಿ ಕಾಣಿಸಿಕೊಂಡ ಬೆಂಕಿ



• ಪ್ರಜೋದಯ ವರದಿ

**ಹಾಸನ:** ನಗರದ ಎನ್.ಆರ್. ವೃತ್ತದಲ್ಲಿ ಚಲಿಸುತ್ತಿದ್ದ ಬೈಕ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿ ಕೊಂಡು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದ ಘಟನೆ ಬುಧವಾರ ನಡೆದಿದೆ.

ಬೈಕ್ ಚಲಿಸುತ್ತಿದ್ದ ವೇಳೆಯೇ ಏಕಾಏಕಿ ಬೆಂಕಿ ಹೊತ್ತಿಕೊಂಡಿದ್ದರಿಂದ ಅಪಾಯ ಗಮನಿಸಿದ ಬೈಕ್ ಸವಾರ ಕ್ಷಣಾರ್ಧದಲ್ಲೇ ವಾಹನದಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಬೆಂಕಿಯ ಜ್ವಾಲೆ ಕೆಲವೇ ಕ್ಷಣದಲ್ಲಿ ಬೈಕ್‌ನ್ನು ಆವರಿಸಿ ಕೊಂಡಿದ್ದು, ಕೆಲ ಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಸ್ಥಳೀಯರ ಸಹಕಾರದಿಂದ ಬೆಂಕಿ ನಿಯಂತ್ರಣಕ್ಕೆ ತರಲಾಗಿದ್ದು, ಘಟನೆ ಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಬೆಂಕಿ ಕಾಣಿಸಿಕೊಳ್ಳಲು ತಾಂತ್ರಿಕ ದೋಷ ಕಾರಣವಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

# ಸಿಲಿಂಡರ್ ಪೂರೈಕೆ ವ್ಯತ್ಯಯ: ಹೋಟೆಲ್ ಉದ್ಯಮಕ್ಕೆ ಹೊಡೆತ

• ಪ್ರಜೋದಯ ವರದಿ

**ಹಾಸನ:** ಪಶ್ಚಿಮ ಏಷ್ಯಾ ಪ್ರಾಂತ್ಯದಲ್ಲಿನ ಯುದ್ಧದ ಪರಿಣಾಮ ಜಿಲ್ಲೆಯಲ್ಲಿಯೂ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿ ಹೋಟೆಲ್‌ಗಳು, ಕ್ಯಾಂಟೀನ್‌ಗಳು ಹಾಗು ಅನಿಲ ಆಧಾರಿತ ವಾಹನಗಳ ಸವಾರರು ಸಂಕಷ್ಟ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ಆಮದು-ರಫ್ತು ವ್ಯವಹಾರದಲ್ಲಿ ಕೊರತೆ ಉಂಟಾಗಿ ಇಂಧನ ಮತ್ತು ಅನಿಲ ಸರಬರಾಜಿನ ಮೇಲೂ ಪರಿಣಾಮ ಬೀರಿದೆ. ಅದರ ಪರಿಣಾಮವಾಗಿ ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳ ಪೂರೈಕೆಯಲ್ಲಿ ತೊಂದರೆ ಎದುರಾಗಿ ಹೋಟೆಲ್ ಉದ್ಯಮಕ್ಕೆ ಸಮಸ್ಯೆ ಎದುರಾಗಿದೆ.

ನಗರ ಸೇರಿ ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳು ಸಮರ್ಪಕ ಪ್ರಮಾಣದಲ್ಲಿ ಪೂರೈಕೆಯಾಗುತ್ತಿಲ್ಲ. ಮಂಗಳವಾರದಿಂದ ಹೊಸ ಸಿಲಿಂಡರ್‌ಗಳು ಸರಿಯಾಗಿ ಸಿಗದೇ ಇರುವ ಕಾರಣ ಈಗಿರುವ ಸಿಲಿಂಡರ್‌ಗಳನ್ನೇ ಬಳಸಿಕೊಂಡು ಹೋಟೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಕೆಲವರು ಮನೆ ಬಳಕೆಯ ಅನಿಲ ಸಿಲಿಂಡರ್‌ಗಳನ್ನು ಬೇರೆ ಕೆಲಸಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆಂದು ಹೋಟೆಲ್ ಮಾಲೀಕರು ದೂರಿದ್ದಾರೆ.

## ಆಟೋ ಚಾಲಕರಿಗೂ ಹೆಚ್ಚುವರಿ ಹೊರೆ



ಅನಿಲ ಬಳಕೆಯ ವಾಹನ ಸವಾರರೂ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೆಲವು ಗ್ಯಾಸ್ ಬಂಕ್‌ಗಳಲ್ಲಿ ಅನಿಲ ಲಭ್ಯವಿಲ್ಲದ ಕಾರಣ ವಾಹನಗಳನ್ನು ಓಡಿಸಲು ತೊಂದರೆ ಉಂಟಾಗಿದೆ. ಕಳೆದ ಎರಡು ದಿನಗಳ ಹಿಂದೆ ಕಿಲೋಗ್ರಾಂಗೆ 55 ಇದ್ದ ಗ್ಯಾಸ್ ದರ ಈಗ 75ಕ್ಕೆ ಏರಿಕೆಯಾಗಿರುವುದರಿಂದ ಆಟೋ ಚಾಲಕರು ಹೆಚ್ಚುವರಿ ಆರ್ಥಿಕ ಹೊರೆ ಎದುರಿಸುತ್ತಿದ್ದಾರೆ. ಬಾಡಿಗೆ ಕಡಿಮೆ ಇರುವ ಸಂದರ್ಭದಲ್ಲಿ ದಿಢೀರ್ ದರ ಏರಿಕೆಯಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಅದರ ಜೊತೆಗೆ ಇಂದಿರಾ ಕ್ಯಾಂಟೀನ್‌ಗಳು, ಹಾಸ್ಟೆಲ್‌ಗಳು, ಪಿಜಿ ವಸತಿ ಗೃಹಗಳು ಸೇರಿ ಹಲವು ಕಡೆಗಳಲ್ಲಿಯೂ ಗ್ಯಾಸ್ ಪೂರೈಕೆಯ ಸಮಸ್ಯೆಯಿಂದ ಆತಂಕದ ವಾತಾವರಣ ನಿರ್ಮಾಣವಾಗಿದೆ. ವಾಣಿಜ್ಯ ಗ್ಯಾಸ್ ಪೂರೈಕೆಯಲ್ಲಿ ಉಂಟಾದ ಸಮಸ್ಯೆಯಿಂದ ಮನೆ ಬಳಕೆಯ ಗ್ಯಾಸ್ ಕೂಡ ಅಭಾವವಾಗ ಬಹುದೆಂಬ ಆತಂಕದಿಂದ ಕೆಲ ಸಾರ್ವ ಜನಿಕರು ಗ್ಯಾಸ್ ಏಜೆನ್ಸಿಗಳ ಮುಂದೆ ಸಾಲಿನಲ್ಲಿ ನಿಂತು ಬುಕ್ಕಿಂಗ್ ಮಾಡಲು ಮುಂದಾಗುತ್ತಿದ್ದಾರೆ. ಹಾಸನ, ಬೇಲೂರು ಸೇರಿ ಕೆಲ ತಾಲ್ಲೂಕು ಕೇಂದ್ರಗಳಲ್ಲಿ ಗ್ರಾಹಕರು ಮುಂಚಿತ ವಾಗಿ ಬುಕ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅರಕಲಗೂಡಿನಲ್ಲಿ ಗ್ಯಾಸ್ ಏಜೆನ್ಸಿಗಳ ಅಂಗಡಿಯಲ್ಲಿ ಗ್ಯಾಸ್ ಖಾಲಿ ಎಂದು ಬೋರ್ಡ್ ಹಾಕಿದ್ದಾರೆ. ನಿಯಮಾನುಸಾರ ಒಂದು ಸಿಲಿಂಡರ್ ಪಡೆದ ಬಳಿಕ ಸುಮಾರು 25 ದಿನಗಳ ನಂತರ ಮಾತ್ರ ಆನ್‌ಲೈನ್ ಬುಕ್ಕಿಂಗ್ ಮಾಡಲು ಅವಕಾಶ ಇರುವು ದರಿಂದ ಹಲವರಿಗೆ ಬುಕ್ಕಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ.

**ಗೃಹಬಳಕೆ ಸಿಲಿಂಡರ್‌ಗಳಿಗೆ ಕೊರತೆ ಇಲ್ಲ**

ಜಿಲ್ಲೆಯಲ್ಲಿ ಗೃಹಬಳಕೆ ಅನಿಲ ಸಿಲಿಂಡರ್‌ಗಳಿಗೆ ಯಾವುದೇ ಕೊರತೆ ಇಲ್ಲ. ವಾಣಿಜ್ಯ ಗ್ಯಾಸ್ ಪೂರೈಕೆಯಲ್ಲಿ ಸ್ವಲ್ಪ ವ್ಯತ್ಯಯ ಉಂಟಾಗಿದೆ. ಇದುವರೆಗೆ ಅನಿಲ ಕೊರತೆಯಿಂದ ಯಾವುದೇ ಹೋಟೆಲ್ ಅಥವಾ ಅಂಗಡಿ ಬಂದ್ ಆಗಿರುವ ಮಾಹಿತಿ ಇಲ್ಲ, ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣ ದಲ್ಲಿ ಅನಿಲ್ ಲಭ್ಯವಿದ್ದು ಸಾರ್ವಜನಿಕರು ಆತಂಕಪಡಬೇಕಿಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿ ತಿಳಿದ್ದಾರೆ.

# ಮಾರ್ಗಸೂಚಿ ದರ ಪರಿಷ್ಕರಣೆ ಅಗತ್ಯ

**ಬೆಂಗಳೂರು:** ಭೂ ಸ್ವಾಧೀನ ಪ್ರಕ್ರಿಯೆ ಪರಿಹಾರದ ವಿಚಾರದಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಲು ಕಾಲಕಾಲಕ್ಕೆ ಮಾರ್ಗಸೂಚಿ ದರ ಪರಿಷ್ಕರಣೆ ಮಾಡುವುದೊಂದೇ ಪರಿಹಾರ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ವಿಧಾನ ಪರಿಷತ್‌ನಲ್ಲಿ ಸದಸ್ಯ ಕೆ.ಎಸ್.ನವೀನ್ ಅವರು, 2019ಕ್ಕೂ ಹಿಂದಿನ ಮಾರ್ಗಸೂಚಿ ದರ ಆಧಾರದಲ್ಲಿ ಈಗಿನ ಭೂಸ್ವಾಧೀನಕ್ಕೆ ಪರಿಹಾರ ನೀಡುವುದು ರೈತರಿಗೆ ನಷ್ಟವಲ್ಲವೇ ಎಂದು ಪ್ರಶ್ನಿಸಿದರು.

ಪ್ರಶ್ನೆಗೆ ಉತ್ತರ ನೀಡಿದ ಕಂದಾಯ ಸಚಿವ, ಭೂ ಸ್ವಾಧೀನಕ್ಕೆ ರೈತರಿಗೆ ಪರಿಹಾರ ನೀಡುವ ಸಂಬಂಧ 2013ರ ಕಾನೂನಿನಲ್ಲಿ ಸ್ಪಷ್ಟವಾಗಿದೆ. ಈ ಕಾನೂನಿನ ಪ್ರಕಾರ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ಅಂತಹ ಭೂಮಿಗೆ ಹೊಸದಾಗಿ ಮಾರ್ಗಸೂಚಿ ದರವನ್ನು ಪರಿಷ್ಕರಿಸುವುದಿಲ್ಲವೆಂದರು.

# ಬಿಳಿಸುಳಿ ರೋಗ: ರೈತರಿಗೆ ಇನ್ನೂ ಬಾರದ ಪರಿಹಾರ

## ಜಿಲ್ಲೆಯ ಅನ್ನದಾತರ ನಿರೀಕ್ಷೆ ಹುಸಿ | 5,650 ಹೆಕ್ಟೇರ್ ಬೆಳೆ ನಾಶ

• ಪ್ರಜೋದಯ ವರದಿ

**ಹಾಸನ:** ಕಳೆದ ಬಾರಿ ಮುಸುಕಿನ ಜೋಳ ಬೆಳೆಗೆ ತಗುಲಿದ ಬಿಳಿಸುಳಿ ರೋಗದಿಂದ ಜಿಲ್ಲೆಯ ಅನ್ನದಾತರು ತೀವ್ರ ನಷ್ಟಕ್ಕೀಡಾಗಿದ್ದು, ಸರ್ಕಾರದಿಂದ ಬಿಡಿಗಾಸು ಪರಿಹಾರ ಸಿಗದೆ ಪರಿತಪಿಸುವಂತಾಗಿದೆ.

ಬಿಳಿ ಸುಳಿ ರೋಗದಿಂದ ಭಾರೀ ಸಮಸ್ಯೆಯಾದ ಹಿನ್ನಲೆಯಲ್ಲಿ ರಾಜ್ಯ ಹಾಗು ಕೇಂದ್ರದಿಂದ ವಿಜ್ಞಾನಿಗಳ ತಂಡ ಭೇಟಿ ನೀಡಿ ಪರಿಶೀಲಿಸಿತು. ಕಳಪೆ ಬಿತ್ತನೆ ಬೀಜ ಹಾಗು ಹವಾಮಾನ ವೈಪರೀತ್ಯದಿಂದ ರೋಗ ಉಲ್ಬಣಗೊಂಡಿದೆ ಎಂಬ ವರದಿಯೂ ಬಿಡುಗಡೆ ಆಯಿತು. ಸೂಕ್ತ ಪರಿಹಾರ ನೀಡಬೇಕೆಂದು ಜಿಲ್ಲೆಯ ರೈತರು ಆಗ್ರಹಿಸಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪರಿಹಾರ ಬಿಡುಗಡೆ ಮಾಡುವ ಭರವಸೆ ನೀಡಿದ್ದರು. ಆದರೆ, ಒಂದು ರೂಪಾಯಿ ಪರಿಹಾರ ನೀಡಲಿಲ್ಲ. ಬೆಳೆ ವಿಮೆ ಮಾಡಿಸಿಕೊಂಡಿದ್ದ ರೈತರಿಗೂ ಅಷ್ಟೇನೂ ಲಾಭವಾಗಿಲ್ಲ. ಹೀಗಾಗಿ ಈ ವರ್ಷ ಮುಸುಕಿನ ಜೋಳ ಬಿತ್ತನೆಯಿಂದ ದೂರ ಉಳಿಯುವ ಚಿಂತನೆಯನ್ನು ರೈತರು ನಡೆಸಿದ್ದಾರೆ.



ಜಿಲ್ಲೆ 2,29,974 ಹೆಕ್ಟೇರ್ ಬಿತ್ತನೆ ಪ್ರದೇಶ ಹೊಂದಿದ್ದು ಕಳೆದ ವರ್ಷ 98,010 ಹೆಕ್ಟೇರ್‌ನಲ್ಲಿ ಮುಸುಕಿನ ಜೋಳ ಬಿತ್ತನೆಯಾಗಿತ್ತು. ಅಂದರೆ ಒಟ್ಟು ಬಿತ್ತನೆ ಪ್ರದೇಶದ ಶೇ.40 ರಷ್ಟು ಭೂಮಿ ಯಲ್ಲಿ ಮುಸುಕಿನ ಜೋಳ ಬೆಳೆ ಕೈಗೊಳ್ಳಲಾಗಿದೆ. ಆದರೆ ಈ ಬಾರಿ ಅದರ ಪ್ರಮಾಣ ಮತ್ತಷ್ಟು ಕುಸಿಯುವ ಸಾಧ್ಯತೆಯನ್ನು ಅಲ್ಲ ಗಳೆಯುವಂತಿಲ್ಲ. 5,650 ಹೆಕ್ಟೇರ್ ಜೋಳ ಬಿಳಿ ಸುಳಿ ರೋಗಕ್ಕೆ ಸಿಲುಕಿ ಸಂಪೂರ್ಣ ನಾಶವಾಗಿದೆ.

ಮಹತ್ವದ ಬೆಳೆಯು ರೋಗಕ್ಕೆ ಸಿಲುಕಿದ್ದರಿಂದ ಕೃಷಿ ಇಲಾಖೆ ನೇತೃತ್ವ ದಲ್ಲಿ ವಿಜ್ಞಾನಿಗಳ ತಂಡ ಚನ್ನರಾಯ ಪಟ್ಟಣ, ಹೊಳೆನರಸೀಪುರ, ಅರಸೀಕೆರೆ ಭಾಗದಲ್ಲಿ ಬೆಳೆ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದಕ್ಕೆ ಸೂಕ್ತ ಪರಿಹಾರ ನೀಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಲಿಖಿತ ಪತ್ರವನ್ನು ಬರೆದಿದ್ದರು. ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ.

**ರೈತರಿಗೆ ಹೆಚ್ಚಿದ ಅರಿವು ಕಾರ್ಯಕ್ರಮ**

2026ರ ಮೇ ತಿಂಗಳಲ್ಲಿ ಮುಸುಕಿನ ಜೋಳ ಬಿತ್ತನೆ ಕಾರ್ಯ ಶುರುವಾಗುವುದರಿಂದ ರೈತರಿಗೆ ಈಗಿನಿಂದಲೇ ಬಿಳಿಸುಳಿ ರೋಗ ಹತೋಟಿ ಸಂಬಂಧ ಅರಿವು ಮೂಡಿಸುವ ಪ್ರಯತ್ನವನ್ನು ಕೃಷಿ ಇಲಾಖೆ ಮಾಡುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ನಿರ್ದೇಶನ ಹಿನ್ನಲೆಯಲ್ಲಿ ಕರಪತ್ರ ಹಂಚಲಾಗುತ್ತಿದೆ. ಜೊತೆಗೆ ಈಗಾಗಲೇ ಎರಡು ಬಾರಿ ರೈತ ಮುಖಂಡರೊಂದಿಗೆ ಸಭೆ ಸಹ ನಡೆಸಲಾಗಿದೆ.

ಬಿತ್ತನೆಗೂ ಮೊದಲು ಏಪ್ರಿಲ್ ಒಳಗೆ ಆಳವಾದ ಮಾಗಿ ಉಳುಮೆ ಮಾಡುವುದು. ಹಿಂದಿನ ವರ್ಷ ಬಿಳಿ ಸುಳಿ ರೋಗ ಕಾಣಿಸಿಕೊಂಡ ತಾಕುಗಳಲ್ಲಿ ಪುನ: ಮುಸುಕಿನ ಜೋಳವನ್ನು ಬೆಳೆ ಯುವುದರ ಬದಲು ದ್ವಿದಳ ಧಾನ್ಯಗಳಾದ ತೊಗರಿ, ಅಲಸಂದೆ, ಉದ್ದು, ಅವರೆ, ನೆಲಗಡಲೆ ಅಥವಾ ಇತರೆ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡುವುದು. ದೀರ್ಘಾವಧಿ ರಾಗಿ ತಳಿಗ ಳಾದ ಎಂ.ಆರ್.-1, ಎಂಆರ್ 6ಗಳನ್ನು ಪರ್ಯಾಯ ಬೆಳೆಯಾಗಿ ಬೆಳೆಯಬಹುದು. ಆಗಸ್ಟ್ - ಸೆಪ್ಟೆಂಬರ್‌ನಲ್ಲಿ ಮಧ್ಯಮಾವಧಿ ರಾಗಿ ತಳಿಗಳಾದ ಜಿಪಿಯು-28, ಎಂಎಲ್ 365, ಕೆಎಂಆರ್ 301, ಜಿಪಿಯು 66 ತಳಿಗಳನ್ನು ಪರ್ಯಾಯವಾಗಿ ಬೆಳೆಯುವುದು. ಬಿತ್ತನೆ ಸಮಯದಲ್ಲಿ ಪ್ರತಿ ಸಾಲಿನಿಂದ ಸಾಲಿಗೆ 60 ಸೆಂ.ಮೀ. ಮತ್ತು ಗಿಡದಿಂದ ಗಿಡಕ್ಕೆ 25 ಸೆಂ.ಮೀ. ಅಂತರ ದೊಂದಿಗೆ ಬಿತ್ತನೆ ಮಾಡುವುದು. ಮಣ್ಣಿನಲ್ಲಿ ಹೆಚ್ಚಿನ ತೇವಾಂಶವಿರುವ ಸಂದರ್ಭ ಹಾಗು ಹೆಚ್ಚು ಮಳೆಯಾಗುವ ಸಂದರ್ಭದಲ್ಲಿ ಬಿತ್ತನೆ ಮುಂದೂಡಬೇಕು. ಬಿತ್ತನೆ ಬೀಜಗಳನ್ನು ಅಧಿಕೃತ ಬಿತ್ತನೆ ಬೀಜ ಮಾರಾಟಗಾರರಿಂದ ಖರೀದಿಸುವುದು ಹಾಗು ಕಡ್ಡಾಯವಾಗಿ ಮಾರಾಟಗಾರರಿಂದ ಬಿಲ್ ಪಡೆಯಬೇಕೆಂದು ಸಲಹೆ ನೀಡಿದೆ.

# ರಾಗಿ ಖರೀದಿಯಲ್ಲಿ ಅಕ್ರಮ ಎಸಗಿದರೆ ನಿರ್ದಾಕ್ಷಿಣ್ಯ ಕ್ರಮ

• ಪ್ರಜೋದಯ ವರದಿ

**ಹಾಸನ:** ನೋಂದಣಿಯ ಜೇಷ್ಠತೆಯಂತೆ ರೈತರಿಂದ ಖರೀದಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ರಾಗಿ ತೆಗೆದುಕೊಳ್ಳಬೇಕು ಹಾಗು ನಿಗದಿತ ರೈತರಿಂದ ಮಾತ್ರ ಪಡೆಯಬೇಕು. ವ್ಯಾಪಾರಿ ಅಥವಾ ಮಧ್ಯವರ್ತಿಗಳಿಗೆ ಆದ್ಯತೆ ನೀಡಿದರೆ ನಿದಾಕ್ಷಿಣ್ಯ ಕ್ರಮ ಜ ರ' ು ಗಿ ಸ' ಲಾ ಗ' ು ವ' ು ದ' ೆ ಂ ದ' ು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಬೆಂಬಲ ಬೆಲೆಯಡಿ ರಾಗಿ ಖರೀದಿಯಲ್ಲಿ ಆಗುತ್ತಿರುವ ತೊಂದರೆಗಳ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ಖರೀದಿ ಕೇಂದ್ರದಲ್ಲಿ ರಾಗಿಯ ಗುಣಮಟ್ಟ ಪರೀಕ್ಷೆ ಮಾಡಿಯೇ ತೆಗೆದು ಕೊಳ್ಳಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು. ತೂಕದಲ್ಲಿ ಯಾವುದೇ ಲೋಪವಾಗದಂತೆ ಅಧಿಕಾರಿ ಗಳು ಎಚ್ಚರ ವಹಿಸುವಂತೆ ಸೂಚಿಸಿದರು.



ಖರೀದಿ ಕೇಂದ್ರದಿಂದ ಗೋದಾಮಿಗೆ ಸ್ಥಳಾಂತರಿಸಲು ಟ್ರಕ್‌ಗಳ ಸಂಖ್ಯೆ ಕಡಿಮೆ ಇದೆ. ದಿನವಿಡೀ ರೈತರು ಕಾಯಬೇಕಾದ ಸ್ಥಿತಿ ಎದುರಾಗಿದೆ ಎಂಬ ದೂರುಗಳು ಸಲ್ಲಿಕೆಯಾಗುತ್ತಿವೆ. ಆದ್ದರಿಂದ ಕೂಡಲೇ ಹೆಚ್ಚಿನ ಟ್ರಕ್‌ಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಖರೀದಿ ಕೇಂದ್ರದ ಆವರಣದಲ್ಲಿ ಕಡ್ಡಾಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಅಗತ್ಯವಿದ್ದರೆ ಉಪಹಾರದ ವ್ಯವಸ್ಥೆಯನ್ನು ಸಹ ಮಾಡಬೇಕು. ಖರೀದಿ ಕೇಂದ್ರದ ಆವರಣ ದಲ್ಲಿ ಶೌಚಾಲಯ ವ್ಯವಸ್ಥೆ ಮಾಡುವಂತೆ ಸೂಚಿಸಿದರು.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿಯ ಬೂಕನ ಬೆಟ್ಟ ಖರೀದಿ ಕೇಂದ್ರದಲ್ಲಿ ಮಧ್ಯವರ್ತಿಗಳ » ನಾಲ್ಕನೇ ಪುಟದಲ್ಲಿ

# ಯುದ್ಧ ನಿಲ್ಲಿಸಲು ಕೆಆರ್‌ಎಸ್ ನೇತೃತ್ವದಲ್ಲಿ ಮನವಿ

• ಪ್ರಜೋದಯ ವರದಿ

**ಹಾಸನ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದ ದೇಶದ ಆರ್ಥಿಕತೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಕೂಡಲೇ ಯುದ್ಧ ನಿಲ್ಲಿಸಬೇಕೆಂದು ಕೆಆರ್‌ಎಸ್ ನೇತೃತ್ವದಲ್ಲಿ ಬುಧವಾರ ಮನವಿ ಸಲ್ಲಿಸಲಾಯಿತು.

ಜಿಲ್ಲಾಡಳಿತದ ಮೂಲಕ ವಿಶ್ವಸಂಸ್ಥೆಗೆ ಮನವಿ ಸಲ್ಲಿಸಿ ಮಾತನಾಡಿದ ಮುಖಂಡರು, ಕಚ್ಚಾ ತೈಲ ಆಮದಿನ ಮೇಲೆ ಪರಿಣಾಮ ಬೀರುತ್ತಿದೆ. ಕಮರ್ಷಿಯಲ್ ಹಾಗು ಗೃಹ ಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆಯಿಂದ ಹೋಟೆಲ್ ಮಾಲೀಕರು, ಸಿಹಿತಿಂಡಿ ತಯಾರಕರು ಹಾಗು ಸಾರ್ವಜನಿಕರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಮನವರಿಕೆ ಮಾಡಿದರು.

ನಗರದ ಹಲವಾರು ಹೋಟೆಲ್‌ಗಳಲ್ಲಿ ದಿನನಿತ್ಯ ಏಳರಿಂದ ಎಂಟು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸುತ್ತಿದ್ದರೆ, ಕಳೆದ ಮೂರು ದಿನಗಳಿಂದ ಕೇವಲ ಎರಡು ಸಿಲಿಂಡರ್ ಮಾತ್ರ ಪೂರೈಕೆಯಾಗುತ್ತಿವೆ. ಆದರಿಂದ ಹೋಟೆಲ್‌ಗಳು ತಮ್ಮ ಕಾರ್ಯಾವಧಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗಿದೆ ಎಂದರು.



ಕೆ.ಆರ್.ಪುರಂ ಪ್ರದೇಶದಲ್ಲಿರುವ ಗಜಾನನ ಹೋಟೆಲ್‌ನಲ್ಲಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್ ಕೊರತೆಯಿಂದ ಮಾಲೀಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಇದೇ ಸಮಸ್ಯೆ ಸಿಹಿ ತಿಂಡಿ ತಯಾರಿಕಾ ಅಂಗಡಿಗಳಿಗೂ ತಟ್ಟಿದೆ. ದಿನಕ್ಕೆ ಎಂಟರಿಂದ ಹತ್ತು ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸುತ್ತಿದ್ದ ಸಿಹಿ ಪದಾರ್ಥ ತಯಾರಿಕಾ ಅಂಗಡಿಗಳಿಗೆ ಕಳೆದ ನಾಲ್ಕು ದಿನಗಳಿಂದ ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್ ಪೂರೈಕೆಯಾಗುತ್ತಿಲ್ಲವೆಂದರು.

ನಗರದ ಹೆಚ್.ಎಸ್.ಪ್ರಕಾಶ್ ರಸ್ತೆಯಲ್ಲಿರುವ ಹಾಸನಾಂಬ ಇಂಡೇನ್ ಗ್ಯಾಸ್ ಏಜೆನ್ಸಿಯಲ್ಲಿ ಮೊದಲೇ ಬುಕ್ಕಿಂಗ್ ಮಾಡಿದ್ದವರಿಗೂ ಸಿಲಿಂಡರ್ ದೊರೆಯದೆ ಜನರು ಪರದಾಡುತ್ತಿದ್ದಾರೆ.

ಗ್ಯಾಸ್ ಸಿಲಿಂಡರ್ ಅಭಾವದಿಂದ ಹೋಟೆಲ್ ವಲಯ ಹಾಗು ಸಾರ್ವಜನಿಕ ಜೀವನದ ಮೇಲೂ ಪರಿಣಾಮ ಬೀರುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಪರಿಹರಿಸಿ ಸಮರ್ಪಕವಾಗಿ ವಾಣಿಜ್ಯ ಮತ್ತು ಗೃಹಬಳಕೆ ಗ್ಯಾಸ್ ಸಿಲಿಂಡರ್ ಪೂರೈಸಬೇಕೆಂದು ಒತ್ತಾಯಿಸಿದರು.

ಪತ್ರಕರ್ತ ಆರ್.ಪಿ.ವೆಂಕಟೇಶ ಮೂರ್ತಿ, ರಾಜಶೇಖರ್, ವೇದಾವತಿ ಮತ್ತಿತರರಿದ್ದರು.

## ನವಮಂಗಳೂರು ಬಂದರಿನಲ್ಲಿ ಸಿಲುಕಿಕೊಂಡ ಕಂಟೇನರ್ | ಯುದ್ಧದ ನಡುವೆ ದರ ಕೊಂಚ ಏರಿಕೆ

# ಇರಾನ್-ಇಸ್ರೇಲ್ ಸಂಘರ್ಷ: ಕಾಫಿ ರಫ್ತಿಗೆ ಸಂಕಷ್ಟ

• ಪ್ರಜೋದಯ ವರದಿ

**ಹಾಸನ:** ಮಧ್ಯಪ್ರಾಚ್ಯದಲ್ಲಿ ತೀವ್ರಗೊಂಡಿರುವ ಇರಾನ್-ಇಸ್ರೇಲ್ ಸಂಘರ್ಷದ ಪರಿಣಾಮ ಕಾಫಿ ಮತ್ತು ಕೃಷಿ ಉತ್ಪನ್ನಗಳ ರಫ್ತು ಮೇಲೆ ವ್ಯತಿರಿಕ್ತ ಪರಿಣಾಮ ಬೀಳತೊಡಗಿದೆ. ಗಲ್ಫ್ ಪ್ರದೇಶದ ಬಂದರುಗಳಲ್ಲಿ ಹಡಗು ಸಂಚಾರದಲ್ಲಿ ವ್ಯತ್ಯಯ ಉಂಟಾದ ಹಿನ್ನಲೆ ಭಾರತದ ಕಾಫಿ ರಫ್ತು ಕಾರ್ಯ ಅಸ್ತವ್ಯಸ್ತವಾಗಿದೆ.

ಹಾಸನ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಉತ್ಪಾದನೆಯಾಗುವ ಕಾಫಿ ಪ್ರಮುಖವಾಗಿ ಮಧ್ಯಪ್ರಾಚ್ಯ ಹಾಗು ಯುರೋಪ್ ದೇಶಗಳಿಗೆ ರಫ್ತಾಗುತ್ತದೆ. ಯುದ್ಧ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಹಡಗು ಸಂಚಾರದಲ್ಲಿ ವ್ಯತ್ಯಯ ಉಂಟಾಗಿ ರಫ್ತು ಕಾರ್ಯಕ್ಕೆ ಅಡಚಣೆ ಎದುರಾಗಿದೆ. ಅದರಿಂದ ಕಾಫಿ ವ್ಯಾಪಾರಿಗಳು ಹಾಗು ರಫ್ತುಗಾರರಲ್ಲಿ ಆತಂಕ ವ್ಯಕ್ತವಾಗಿದೆ. ಸಂಘರ್ಷ ಮುಂದುವರಿದರೆ ಕಾಫಿ ಸೇರಿ ಹಲವು ಕೃಷಿ ಉತ್ಪನ್ನಗಳ ರಫ್ತು, ಬೆಲೆ ಹಾಗು ವ್ಯಾಪಾರ ಚಟುವಟಿಕೆಗಳ ಮೇಲೆ ಹೆಚ್ಚಿನ ಪರಿಣಾಮ ಬೀರುವ ಸಾಧ್ಯತೆ ಇದೆ.

ಹಾರ್ಮುಜ್ ಜಲಸಂಧಿ ಭಾಗದಲ್ಲಿ ಉದ್ವಿಗ್ನತೆ ಹೆಚ್ಚಿರುವುದರಿಂದ ಹಲವು ಸರಕು ಹಡಗು ಗಳು ಗಲ್ಫ್ ರಾಷ್ಟ್ರಗಳ ಬಂದರುಗಳಲ್ಲಿ ನಿಲ್ಲಿಸಿಕೊಂಡಿರುವುದರಿಂದ ಭಾರತದಿಂದ ಹೊರಡುವ ಸರಕು ಸಾಗಾಟವೂ ನಿಧಾನಗೊಂಡಿದೆ. ನವ ಮಂಗಳೂರು ಬಂದರಿನಲ್ಲಿ ರಫ್ತಿಗೆ ಸಿದ್ಧವಾಗಿದ್ದ ಸುಮಾರು 50ಕ್ಕೂ ಹೆಚ್ಚು ಕಂಟೇನರ್‌ಗಳು ಈಗಾಗಲೇ ಸಿಲುಕಿಕೊಂಡಿವೆ. ಅದರಲ್ಲಿ ಕಾಫಿ, ಏಲಕ್ಕಿ, ಕಾಳು ಮೆಣಸು ಸೇರಿ ಸಂಬಾರ ಪದಾರ್ಥಗಳ ಕಂಟೇನರ್‌ಗಳೂ ಸೇರಿವೆ.



**ಕಾಫಿ ಮಾರುಕಟ್ಟೆಗೆ ಹೊಡೆತ**

ಮಧ್ಯಪ್ರಾಚ್ಯದ ಅಸ್ಥಿರತೆಯಿಂದ ಸಾಗಣೆ ದರ, ವಿಮಾ ವೆಚ್ಚ ಮತ್ತು ಇಂಧನ ಖರ್ಚು ಹೆಚ್ಚಾಗಿದೆ. ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳಿಂದ ರಫ್ತಾಗುವ ಕಾಫಿ ಸರಕುಗಳ ಸಾಗಣೆ ಮಾರ್ಗಗಳು ಈ ಭಾಗದ ಮೂಲಕ ಹಾದುಹೋಗುವುದರಿಂದ, ವೆಚ್ಚದ ಭಾರ ನೇರವಾಗಿ ಕಾಫಿ ದರದ ಮೇಲೆ ಪರಿಣಾಮ ಬೀರುತ್ತಿದೆ. ಕಾಫಿ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನದಲ್ಲಿದ್ದರೂ, ಹೆಚ್ಚಿನ ಪ್ರಮಾಣದ ಅರೇಬಿಕಾ ಮತ್ತು ರೋಬಸ್ಟಾವನ್ನು ರಫ್ತು ಮಾಡುತ್ತದೆ. ಜಾಗತಿಕ ಮಾರುಕಟ್ಟೆಯ ಏರಿಳಿತ ದೇಶೀಯ ಬೆಲೆಗಳ ಮೇಲೂ ಪರಿಣಾಮ ಬೀರುತ್ತಿದೆ.

**ಬುಧವಾರದ ಕಾಫಿ ಧಾರಣೆ**
(50 ಕೆಜಿಗೆ)
ಅರೇಬಿಕಾ ಪಾರ್ಚ್‌ಮೆಂಟ್: 23,000
ಅರೇಬಿಕಾ ಚೆರಿ : 13,000
ರೊಬಸ್ಟಾ ಪಾರ್ಚ್‌ಮೆಂಟ್: 18,500
ರೊಬಸ್ಟಾ ಚೆರಿ : 9,500
ಕಾಳುಮೆಣಸು-680

**ಕಾಫಿ ಧಾರಣೆ ಏರಿಕೆ**

ತೈಲ ಮತ್ತು ಅನಿಲದ ಬೆಲೆಗಳು ಏರಿಕೆಯಾಗಿರುವುದರ ಜೊತೆಗೆ, ಕಾಫಿ ಸೇರಿ ಹಲವು ಕೃಷಿ ಉತ್ಪನ್ನಗಳ ದರಗಳಲ್ಲೂ ಗಣನೀಯ ಏರಿಕೆ ಕಂಡುಬಂದಿದೆ. ಸೋಮವಾರದ ವಹಿವಾಟಿನ ಅಂತ್ಯಕ್ಕೆ ಅರೇಬಿಕಾ ಕಾಫಿ (ಕೆಸಿಕೆ 26) 3.85 ಅಂಕಗಳಷ್ಟು (+1.37%) ಏರಿಕೆಯೊಂದಿಗೆ ಮುಚ್ಚಿದರೆ. ರೋಬಸ್ಟಾ ಕಾಫಿ (ಆರ್‌ಎಂಕೆ26) 148 ಅಂಕಗಳಷ್ಟು (+4.08%) ಜಿಗಿತ ಕಂಡಿತು. ರೋಬಸ್ಟಾ ಬೆಲೆ ಎರಡು ವಾರಗಳಲ್ಲಿ ಜಿಗಿತ ಕಂಡಿದೆ.

ಭಾರತೀಯ ದರದ ಅನ್ವಯ ಫೆಬ್ರವರಿ ಕೊನೆಯ ವಾರದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್-22,200 ರೂ., ಅರೇಬಿಕಾಚೆರಿ-11,800 ರೂ., ರೊಬಸ್ಟಾ ಪಾರ್ಚ್‌ಮೆಂಟ್-17,800 ರೂ., ರೊಬಸ್ಟಾ ಚೆರಿ-8,700 ರೂ. ಇತ್ತು. ಮಾರ್ಚ್ ಎರಡನೇ ವಾರದಲ್ಲಿ ಕೊಂಚ ಏರಿಕೆ ಕಂಡಿದೆ. ಬುಧವಾರದ ಕಾಫಿ ಧಾರಣೆ ಅನ್ವಯ ಅರೇಬಿಕಾ ಪಾರ್ಚ್‌ಮೆಂಟ್-23,000 ರೂ.,

» ನಾಲ್ಕನೇ ಪುಟದಲ್ಲಿ

CMYK CMYK CMYK CMYK

# ರಾಜ್ಯದಲ್ಲಿ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ಸಮಸ್ಯೆಯಿಲ್ಲ

## ದಿನನಿತ್ಯ 3.5 ಕೋಟಿ ಸಿಲಿಂಡರ್‌ಗಳ ಅಗತ್ಯತೆ | ಅನಿಲ ಸಮಸ್ಯೆ ಉಂಟಾಗಿದ್ದರೂ ಗ್ರಾಹಕರು ಯಾವುದೇ ಆತಂಕಪಡುವ ಅಗತ್ಯವಿಲ್ಲ

• ಪ್ರಜೋದಯ ವರದಿ





**ಬೆಂಗಳೂರು:** ಗೃಹ ಹಾಗೂ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ಸದ್ಯಕ್ಕೆ ಯಾವುದೇ ಸಮಸ್ಯೆಯಿಲ್ಲ ಎಂದು ಅನಿಲ ಕಂಪೆನಿಯ ಅಧಿಕಾರಿಗಳು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ. ವಸಂತ ನಗರದ ಆಹಾರ ಭವನದಲ್ಲಿ ಬುಧವಾರ ನಡೆದ ಐಒಸಿ, ಬಿಪಿಸಿ,ಎಚ್‌ಪಿಸಿ, ಜಿಎಐಎಲ್ (ಗಾಲಾ) ಸಂಸ್ಥೆಗಳ ಅಧಿಕಾರಿಗಳು ಆಹಾರ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪರೊಂದಿಗೆ ನಡೆದ ಸಭೆಯಲ್ಲಿ ಇಂಧನ ಕೊರತೆ, ಪೂರೈಕೆ ಬಗ್ಗೆ ವಿವರಗಳನ್ನು ನೀಡಿದರು.

ಜಾಗತಿಕ ಮಟ್ಟದಲ್ಲಿ ಯುದ್ಧದ ಕಾರಣದಿಂದ ಅನಿಲದ ವ್ಯಾಸಲ್ (ಶಿಫ್‌ಗಳಿಗೆ) ಹಾನಿ ಉಂಟಾದ ಹಿನ್ನೆಲೆಯಲ್ಲಿ ಅನಿಲ ಸಮಸ್ಯೆ ಉಂಟಾಗಿದ್ದರೂ ಗ್ರಾಹಕರು ಯಾವುದೇ ಆತಂಕಪಡುವ ಅಗತ್ಯವಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಸಾಮಾನ್ಯವಾಗಿ ಜನರು ಉಪಯೋಗಿಸುವ ಗೃಹ ಬಳಕೆ ಸಿಲಿಂಡರ್ ಮತ್ತು ವಾಣಿಜ್ಯ ಬಳಕೆ ಸಿಲಿಂಡರ್‌ಗಳ ಪೂರೈಕೆಯಲ್ಲಿ ಸದ್ಯ ಯಾವುದೇ ವ್ಯತ್ಯಯವಾಗುವುದಿಲ್ಲ. ಸುಮಾರು 1 ಸಾವಿರ ಮೆಟ್ರಿಕ್ ಟನ್, ಅಂದರೆ ಒಂದು ದಿನಕ್ಕೆ ಸುಮಾರು 50 ಸಾವಿರ ವಾಣಿಜ್ಯ ಬಳಕೆ ಸಿಲಿಂಡರ್‌ಗಳು (19 ಕೆಜಿ) ಬೇಕಾಗುತ್ತದೆ. ಗೃಹ ಬಳಕೆಗೆ ಸುಮಾರು 5 ಸಾವಿರ ಮೆಟ್ರಿಕ್ ಟನ್ ಅಂದರೆ ದಿನಕ್ಕೆ ಸುಮಾರು 3.5 ಕೋಟಿ ಸಿಲಿಂಡರ್‌ಗಳು (14.2 ಕೆಜಿ) ಬೇಕಾಗುತ್ತದೆ.

ಇದು ಪ್ರತಿದಿನ ರಾಜ್ಯದ ಅವಶ್ಯಕತೆಯಾಗಿದ್ದು, ಸದ್ಯ ಇದರ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗುವುದಿಲ್ಲ ಎಂದು ಅಧಿಕಾರಿಗಳು ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಜನರು ಆತಂಕಪಡುವ ಅಗತ್ಯವಿಲ್ಲ. 3.45 ಕೋಟಿ ಮನೆಗಳಿಗೆ ಸಿಲಿಂಡರ್‌ಗಳನ್ನು ನಿರಾಂತಕವಾಗಿ ಒದಗಿಸಬಹುದಾಗಿದೆ. ಭಾರತದಲ್ಲಿ ಶೇ.30ರಷ್ಟು ಮಾತ್ರ ಉತ್ಪಾದನೆ ಇದೆ, ಉಳಿದ ಶೇ.60 ರಿಂದ 70 ರಷ್ಟು ಆಮದು ಮಾಡಿಕೊಳ್ಳುತ್ತಿದ್ದೇವೆ. ಅಮೇರಿಕಾ, ಗಲ್ಫ್, ರಷ್ಯಾ ದೇಶಗಳಿಂದ ಆಮದು ಬರುತ್ತಿದೆ. ಯುದ್ಧದ ಪರಿಸ್ಥಿತಿಯಿಂದ ಸ್ವಲ್ಪ ತಡವಾಗುತ್ತಿದೆ. ಆದರೂ ಜನ ಆತಂಕಪಡುವ ಅಗತ್ಯವಿಲ್ಲ. ಹೋಟೇಲ್, ರೆಸ್ಟೋರೆಂಟ್, ಕಲ್ಯಾಣ ಮಂಟಪಗಳು ಸೇರಿದಂತೆ ವಿವಿಧೆಡೆ ವಾಣಿಜ್ಯ ಬಳಕೆಗೆ ನಿಗಧಿತ ಸಿಲಿಂಡರ್‌ಗಳನ್ನು ಒದಗಿಸಬಹುದಾಗಿದೆ. ಆದರೆ ಹೆಚ್ಚುವರಿ ಸಿಲಿಂಡರ್‌ಗಳನ್ನು ಕೇಳಿದರೆ ಕಷ್ಟ ಸಾಧ್ಯವಾಗುತ್ತದೆ ಎಂದರು.

ಮೊದಲು ಮನೆ ಬಳಕೆಗೆ ಆದ್ಯತೆ ನೀಡಿ, ಕಮರ್ಷಿಯಲ್ ವಿಚಾರದಲ್ಲಿ ಆದ್ಯತೆ ಮೇರೆಗೆ ಆಸ್ಪತ್ರೆಗಳು, ಶಾಲಾ, ಕಾಲೇಜುಗಳ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನೋಡಿಕೊಂಡು ನಂತರ ಹೋಟೇಲ್, ಕಲ್ಯಾಣಮಂಟಪಗಳಿಗೆ ಆದ್ಯತೆಯ ಮೇರೆಗೆ ಸಿಲಿಂಡರ್‌ಗಳನ್ನು ವಿತರಿಸುವ ಬಗ್ಗೆ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ.

ಹಳ್ಳಿಗಳಲ್ಲಾಗಲೀ, ನಗರದಲ್ಲಾಗಲೀ ಜನರು ಮಿತವಾಗಿ ಗ್ಯಾಸ್ ಬಳಸಬೇಕು, ತೀರಾ ಅವಶ್ಯಕತೆ ಇದ್ದಲ್ಲಿ ಮಾತ್ರ ಉಪಯೋಗಿಸಬೇಕು. ಆತಂಕಪಟ್ಟು ಗ್ರಾಹಕರು ಹೆಚ್ಚು ಸಿಲಿಂಡರ್ ಬುಕ್ ಮಾಡಬಾರದು. ಅನಗತ್ಯವಾಗಿ ಪ್ಯಾನಿಕ್‌ಗೆ ಒಳಗಾಗಬಾರದು. ಸರ್ಕಾರ ಮತ್ತು ಆಯಿಲ್ ಕಂಪೆನಿಗಳ ಜೊತೆ ಸಾರ್ವಜನಿಕರು ಪರಿಸ್ಥಿತಿ ನಿಭಾಯಿಸಲು ಸಹಕರಿಸಬೇಕೆಂದು ಮನವಿ ಮಾಡಿದ್ದಾರೆ.

ಸರ್ಕಾರದ ಕಾರ್ಯದರ್ಶಿ ಕನಗವಲ್ಲಿ, ಆಯುಕ್ತ ರವಿಕುಮಾರ್, ಸಚಿವರ ಆಪ್ತ ಕಾರ್ಯದರ್ಶಿ ಡಾ. ಹೆಚ್.ನಟರಾಜ್, ಅನಿಲ ಕಂಪನಿಗಳ ಅಧಿಕಾರಿಗಳಾದ ನೀರಾ ಸಿಂಗ್, ಅರುಂದಿ ಗೊಯಲ್, ದಿವ್ಯ, ಮುರಳಿಚಾರ್, ಸುಬ್ರತ್ ಚಟರ್ಜಿ, ರಾಜೇಶ್ ಸಿಂಗ್, ಸಂಜಯ್ ಕುಮಾರ್ ಸಿಂಗ್, ಪ್ರಣಯ ದೇವನಾಗನ್, ರವಿಕುಮಾರ್ ತಂಡಲ್, ಪ್ರಸೂನ್ ಮಾಲಿ ಹಾಗೂ ನಿಗಮದ ಪ್ರಧಾನ ವ್ಯವಸ್ಥಾಪಕರಾದ ಮಂಜುನಾಥ್ ಉಪಸ್ಥಿತರಿದ್ದರು.

## ನಾಗಮೋಹನದಾಸ್- ಸದಾಶಿವ ಆಯೋಗದ ವರದಿಗಳ ತಿರಸ್ಕಾರಕ್ಕೆ ಆಗ್ರಹಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಆಲೂರು:** ನಾಗಮೋಹನದಾಸ್ ಹಾಗೂ ಸದಾಶಿವ ಆಯೋಗದ ವರದಿಗಳನ್ನು ತಿರಸ್ಕರಿಸುವಂತೆ ಆಗ್ರಹಿಸಿ ಬುಧವಾರ ತಾಲ್ಲೂಕು ಬಲಗೈ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಸಮಿತಿ ಅಧ್ಯಕ್ಷ ಬಸವರಾಜ್ ಮಾತನಾಡಿ, ನಾಗಮೋಹನದಾಸ್ ಹಾಗೂ ಸದಾಶಿವ ಆಯೋಗದ ವರದಿಗಳು ಸಂಪೂರ್ಣ ಅವೈಜ್ಞಾನಿಕವಾಗಿವೆ. ಹಳೆ ಮೀಸಲಾತಿ ಹಕ್ಕುಗಳ ರಕ್ಷಣೆ 2022 ರ ಅಧಿನಿಯಮದಂತೆ, ಸರ್ಕಾರ ಪರಿಶಿಷ್ಟ ಜಾತಿ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿದ್ದ ನಿರ್ಧಾರವನ್ನು ಹಿಂಪಡೆಯುವ ಯಾವುದೆ ಕ್ರಮ ಕೈಗೊಳ್ಳಬಾರದು. ರೋಸ್ಟರ್ ಬಿಂದುಗಳ ಗೊಂದಲ 27-02-2026 ರ ಸರ್ಕಾರದ ಆದೇಶದಂತೆ, ಬಿಂದುಗಳಿಗೆ ಮರಳಿರುವುದು ಸಮುದಾಯದ ಸಾಂವಿದಾನಿಕ ಹಕ್ಕುಗಳಿಗೆ ಧಕ್ಕೆಯಾಗಿದೆ ಎಂದರು.

ಬಲಗೈ ಸಮುದಾಯದ ನೂರಾರು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಗ್ಯಾಸ್ ಸಿಲಿಂಡರ್ ಕೊರತೆ: ಹೋಟೆಲ್‌ಗಳಿಗೆ ಸಂಕಷ್ಟ

• ಪ್ರಜೋದಯ ವರದಿ



**ಬೇಲೂರು:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಈಗ ಸ್ಥಳೀಯ ಮಟ್ಟದಲ್ಲಿಯೂ ಕಾಣಿಸಿಕೊಳ್ಳತೊಡಗಿದ್ದು, ಬೇಲೂರು ಪಟ್ಟಣದಲ್ಲಿ ವಾಣಿಜ್ಯ ಹಾಗೂ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆ ಉಂಟಾಗಿದೆ. ಇದರ ಪರಿಣಾಮವಾಗಿ ಹೋಟೆಲ್ ಮಾಲೀಕರು, ಸಿಹಿತಿಂಡಿ ತಯಾರಕರು ಹಾಗೂ ಸಾರ್ವಜನಿಕರು ಸಂಕಷ್ಟ ಎದುರಿಸುತ್ತಿದ್ದಾರೆ.

ಪಟ್ಟಣದ ಹಲವಾರು ಹೋಟೆಲ್‌ಗಳಲ್ಲಿ ದಿನನಿತ್ಯ ಸುಮಾರು 7 ರಿಂದ 8 ವಾಣಿಜ್ಯ ಸಿಲಿಂಡರ್‌ಗಳನ್ನು ಬಳಸಲಾಗುತ್ತಿತ್ತು. ಆದರೆ ಕಳೆದ ಮೂರು ದಿನಗಳಿಂದ ಕೇವಲ 2 ಸಿಲಿಂಡರ್‌ಗಳು ಮಾತ್ರ ಪೂರೈಕೆಯಾಗುತ್ತಿರುವುದರಿಂದ ಹೋಟೆಲ್‌ಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೆಲ ಹೋಟೆಲ್‌ಗಳಲ್ಲಿ ಗ್ಯಾಸ್ ಕೊರತೆಯಿಂದ ಬೆಳಿಗ್ಗೆ ಮತ್ತು ಸಂಜೆ ಸಮಯದಲ್ಲಿ ಮಾತ್ರ ಅಡುಗೆ ಮಾಡುವಂತಹ ಪರಿಸ್ಥಿತಿ ಎದುರಾಗಿದೆ ಎಂದು ಮಾಲೀಕರು ತಿಳಿಸಿದ್ದಾರೆ.

ಇನ್ನೊಂದೆಡೆ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಗಳ ಕೊರತೆಯೂ ಸಾರ್ವಜನಿಕರನ್ನು ಕಂಗೆಡಿಸಿದೆ. ಆನ್‌ಲೈನ್ ಬುಕ್ಕಿಂಗ್ ವ್ಯವಸ್ಥೆ ಸ್ಥಗಿತಗೊಂಡಿರುವ ಹಿನ್ನೆಲೆಯಲ್ಲಿ ಜನರು ನೇರವಾಗಿ ಗ್ಯಾಸ್ ಏಜೆನ್ಸಿಗಳಿಗೆ ತೆರಳಿ ಬುಕ್ಕಿಂಗ್ ಮಾಡುತ್ತಿದ್ದಾರೆ. ಆದರೆ ಬುಕ್ ಮಾಡಿದ ಬಳಿಕ ಸುಮಾರು 28 ದಿನಗಳ ನಂತರ ಸಿಲಿಂಡರ್ ದೊರೆಯಲಿದೆ ಎಂದು ಏಜೆನ್ಸಿಯವರು ತಿಳಿಸುತ್ತಿದ್ದಾರೆ. ಇದರಿಂದ ಗ್ರಾಹಕರು ಆತಂಕಗೊಂಡಿದ್ದಾರೆ.

## ಸಂಭ್ರಮದಿಂದ ಪರೀಕ್ಷೆ ಬರೆದರೆ ಉತ್ತಮ ಫಲಿತಾಂಶ: ಶಂಭುನಾಥ ಶ್ರೀಗಳು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎಂದರೆ ಭಯ ಪಡುವ ಕಾಲ ಹೋಗಿದೆ. ಆದರೂ ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳು ಭಯದಿಂದ ಪರೀಕ್ಷೆಯನ್ನು ಎದುರಿಸುತ್ತಾರೆ, ಇದರಿಂದ ಹೊರ ಬಂದು ಸಂಭ್ರಮದಿಂದ ಪರೀಕ್ಷೆ ಬರೆದರೆ ಉತ್ತಮ ಫಲಿತಾಂಶ ಲಭಿಸಲಿದೆ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಕಾರ್ಯದರ್ಶಿ ಶಂಭುನಾಥ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಅಣತಿ ಗ್ರಾಮದಲ್ಲಿ ಬಿಜಿಎಸ್ ಪಬ್ಲಿಕ್ ಶಾಲೆ ಹಾಗೂ ಶ್ರೀ ದಿಗಂಬರೇಶ್ವರ ಪ್ರೌಢಶಾಲೆ ವತಿಯಿಂದ ನಡೆದ ಸರಸ್ವತಿ ಪೂಜೆ ಹಾಗೂ ಮಾತಾ, ಪಿತ ಪಾದಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅವರು ಆಶೀರ್ವಚನ ನೀಡಿದರು. ಪರೀಕ್ಷೆಯ ಭಯದಲ್ಲಿ ಹಗಲು ಇರುಳು ಓದುವುದರಿಂದ ಆರೋಗ್ಯ ಸಮಸ್ಯೆ ಎದುರಾಗುತ್ತದೆ, ವಿದ್ಯಾರ್ಥಿಗಳು ಇಷ್ಟ ಪಟ್ಟು ಓದಿದರೆ ಪರೀಕ್ಷೆಯಲ್ಲಿ ಉತ್ತಮ ಅಂಕ ಬರುತ್ತವೆ ಎಂದರು.

ಪರೀಕ್ಷೆಯ ಸಮಯದಲ್ಲಿ ಗುರುಗಳು, ಪೋಷಕರು ಶುಭ ಹಾರೈಸುತ್ತಾರೆ, ಉತ್ತಮ ಹಾದಿಯಲ್ಲಿ ಮಕ್ಕಳು ಸಾಗಬೇಕು ಎಂದು ಸಾಕಷ್ಟು ಮಾರ್ಗದರ್ಶನ ನೀಡುತ್ತಾರೆ ಇದನ್ನು ಮಕ್ಕಳು ಪಾಲನೆ ಮಾಡಿದರೆ ಮುಂದಿನ ಬದುಕು ಹಸನಾಗಲಿದೆ, ಮಕ್ಕಳಿಗೆ ಪವಿತ್ರ ಭಾವನೆ ಇರುತ್ತದೆ, ಆದರೆ ಇತ್ತೀಚಿನ ದಿವಸಗಳ ಆಧುನಿಕ ವಸ್ತುಗಳು ಮಕ್ಕಳ ಮನಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ ಎಂದು ವಿಷಾದಿಸಿದರು.



ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಯಲ್ಲಿ ಸಂಸ್ಕಾರ ನೀಡುತ್ತೇವೆ. ಮನೆಯಲ್ಲಿ ಪೋಷಕರು ಸಹಃ ಮಕ್ಕಳ ಬಗ್ಗೆ ಕಾಳಜಿ ವಹಿಸಬೇಕು, ಎಲ್ಲಾ ವಿಷಯಕ್ಕೂ ಶಾಲೆ ಕಡೆ ಕೈ ತೋರಿಸಿದರೆ ಸಾಲದು, ನಮ್ಮ ಸಂಸ್ಕಾರ ಮನೆಯಿಂದ ಆರಂಭವಾಗಬೇಕು ಎಂದು ಸಲಹೆ ನೀಡಿದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಎ.ಟಿ.ಶಿವರಾಂ ಮಾತನಾಡಿ, ವಿದ್ಯಾರ್ಥಿಗಳು ಸಣ್ಣ-ಪುಟ್ಟ ಕನಸು ಕಾಣುವುದು ಅಪರಾಧ, ದೊಡ್ಡ ಕನಸು ಕಾಣಬೇಕು. ಆಗ ಜೀವನದಲ್ಲಿ ಸಾಧನೆ ಹಾದಿಯನ್ನು ಹಿಡಿಯಲು ಅನುಕೂಲ ಆಗುತ್ತದೆ, ಶಿಕ್ಷಣಕ್ಕಿಂತ ಇಂದು ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿದೆ ಸಾಕಷ್ಟು ಮಂದಿ ಪಠ್ಯದ ಶಿಕ್ಷಣಕ್ಕಿಂತ ತಂತ್ರಜ್ಞಾನದ ಕಡೆ ಗಮನ ಕೊಡಬೇಕಾಗಿದೆ ಎಂದು ಸಲಹೆ ನೀಡಿದರು.

ಭಾವನಾತ್ಮಕ ಚಿಂತನೆಗಳು ಮುಖ್ಯವಾಗಿದೆ, ಬೌದ್ಧಿಕ ಚಿಂತನೆಗಳ ಅಗತ್ಯವಿಲ್ಲ, ಮೆದುಳಿಗೆ ಶಿಕ್ಷಣ ಕೊಡುವ ಬದಲಾಗಿ ಹೃದಯಕ್ಕೆ ಶಿಕ್ಷಣ ಅಗತ್ಯವಿದೆ, ಆಲೋಚನಾ ಶಕ್ತಿ, ಇಚ್ಛಾಶಕ್ತಿ, ಭಾವನಾತ್ಮಕ ಶಕ್ತಿ ಇದ್ದರೆ ಸಾಧನೆ ಮಾಡಬಹುದಾಗಿದೆ, ನಿಮ್ಮ ಆಲೋಚನೆ ವಿಭಿನ್ನವಾಗಿರ ಬೇಕು. ಆಗ ಸಾಧನೆ ಹಾದಿ ಸುಗಮ ವಾಗಲಿದೆ ಎಂದು ತಿಳಿಸಿದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಮ್ಮ ಪೋಷಕರ ಪಾದ ಪೂಜೆ ಮಾಡಿದರು. ಅಣತಿ ಗ್ರಾ.ಪಂ. ಮಾಜಿ ಅಧ್ಯಕ್ಷ ಶ್ರೀಧರ್, ಮುಖಂಡರಾದ ವೆಂಕಟೇಶ್, ಶಿವೇಗೌಡ, ಯೋಗಾನಂದಸ್ವಾಮಿ, ಕಾಂತರಾಜು, ಕೃಷ್ಣೇಗೌಡ, ಬಿಜಿಎಸ್ ಶಾಲೆ ಮುಖ್ಯ ಶಿಕ್ಷಕಿ ಭಾರತಿ, ಪ್ರೌಢಶಾಲೆ ಮುಖ್ಯ ಶಿಕ್ಷಕ ಭಾಸ್ಕರೇಗೌಡ, ಗುಡಿಗೌಡ ಶಿವಸ್ವಾಮಿ, ಪೋಷಕರು ಉಪಸ್ಥಿತರಿದ್ದರು.

### ಹೇಮಾವತಿ ಸಕ್ಕರೆ ಕಾರ್ಖಾನೆ ಚುನಾವಣೆ

## ಕಾಂಗ್ರೆಸ್ ಮುಖಂಡರ ಸಭೆ- ಚರ್ಚೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹೇಮಾವತಿ ಸಕ್ಕರೆ ಕಾರ್ಖಾನೆಯ ಚುನಾವಣೆ ಪೂರ್ವ ಸಿದ್ಧತೆ ಮತ್ತು ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಕಾಂಗ್ರೆಸ್ ಮುಖಂಡರುಗಳ ಸಭೆ ನಡೆಸಿ ಚರ್ಚಿಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮುಖಂಡರ ಸಭೆ ನಡೆಸಿ ಚುನಾವಣೆಯ ಬಗ್ಗೆ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ, ಮಾಜಿ ಎಂಎಲ್ಸಿ ಎಂ.ಎ.ಗೋಪಾಲಸ್ವಾಮಿ, ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಮಾಜಿ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷ ವಿಜಯಕುಮಾರ್, ಹೇಮಾವತಿ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ಎ.ಬಿ.ನಂಜುಂಡೇಗೌಡ, ಮಾಜಿ ನಿರ್ದೇಶಕ ಸಾಸಲುಪುರ ಶಿವರಾಮು, ಹಾಲಿ ನಿರ್ದೇಶಕರಾದ ಚಿಕ್ಕಬಿಳ್ತಿ ರವೀಶ್, ಸಂತೇಶಿವರ ರಾಜಣ್ಣ, ಪುರಸಭೆ ಮಾಜಿ ಅಧ್ಯಕ್ಷ ಸಿ.ಟಿ. ಆಶೋಕ್, ಸಾಣೇನಹಳ್ಳಿ ಮಧು, ಶಂಕರಲಿಂಗೇಗೌಡ ಮತ್ತಿತರಿದ್ದರು.

## ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡುವಂತೆ ಒತ್ತಾಯ

• ಪ್ರಜೋದಯ ವರದಿ

**ಅರಸೀಕೆರೆ:** ರೈತರಿಗೆ ಕಾಯಂ ಸಾಗುವಳಿ ಚೀಟಿ ನೀಡಲು ಸ್ಥಳೀಯ ಶಾಸಕರು ಅಧಿಕಾರಿಗಳು ಮತ್ತು ಸರ್ಕಾರದ ಮೇಲೆ ಒತ್ತಡ ಹಾಕಬೇಕು ಎಂದು ಅನ್ನದಾತ ರೈತ ಸಂಘದ ಪದಾಧಿಕಾರಿಗಳಾದ ಮಧು ಮತ್ತು ಜಯರಾಂ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಶಾಸಕ ಕೆ.ಎಂ.ಶಿವಲಿಂಗೇಗೌಡರು ಕಳೆದ ನಾಲ್ಕು ಅವಧಿಯಿಂದ ಶಾಸಕರಾಗಿದ್ದಾರೆ. ಸಾಗುವಳಿ ಚೀಟಿ ಎಷ್ಟು ವಿತರಿಸಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆ ಆಗುತ್ತಿದೆ. ಶಾಸಕರು ಬಗರ್ ಹುಕುಂ ಸಮಿತಿ ಅಧ್ಯಕ್ಷರೂ ಆಗಿದ್ದಾರೆ. ಮೂಲಗಳ ಪ್ರಕಾರ ಬಹಳ ಕಡಿಮ ಸಾಗುವಳಿ ಚೀಟಿ ವಿತರಣೆ ಮಾಡಿರುವುದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ ಎಂದು ದೂರಿದರು.



ಆಡಳಿತ ಪಕ್ಷ ದ ಶಾಸಕರಾಗಿರುವ ಶಿವಲಿಂಗೇಗೌಡರು ಕೂಡಲೇ ಬಗರ್ ಹುಕುಂ ಸಮಿತಿ ಸಭೆ ಕರೆದು ಯಾರೆಲ್ಲ ರೈತರ ಅರ್ಜಿ ವಜಾ ಆಗಿದ್ದಾವೋ ಅವರಿಗೆ ಕೂಡಲೇ ಕಾಯಂ ಮಂಜೂರಾತಿ ಕೊಡಿಸಬೇಕು ಎಂದು ಒತ್ತಾಯಿಸಿದರಲ್ಲದೆ, ಕೆಲವು ರೈತರು ಹಂಗಾಮಿ ಸಾಗುವಳಿ ಚೀಟಿ ಪಡೆದಿದ್ದಾರೆ, ಅವರು ಕಾಯಂ ಸಾಗುವಳಿ ಚೀಟಿ ಏಕೆ ಪಡೆಯಲಾಗಿಲ್ಲ ಎಂಬುದನ್ನು ಸ್ಪಷ್ಟ ಪಡಿಸಬೇಕು. ರೈತರು ಸಾಗವಳಿ ಚೀಟಿ ಬೇಕೆಂದು ಸರ್ಕಾರದ ಮೊರೆ ಹೋಗುತ್ತಿದ್ದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ನೀವು ತಹಸೀಲ್ದಾರ್‌ಗೆ ಹೇಳುತ್ತೀರೋ, ಸಚಿವರಿಗೆ ಮನವರಿಕೆ ಮಾಡುತ್ತೀರೋ ಕೂಡಲೇ ಕಾಯಂ ಸಾಗುವಳಿ ಚೀಟಿ ನೀಡಲು ಕ್ರಮ ವಹಿಸಬೇಕು ಎಂದು ಕೋರಿದರು.

ನಮೂನೆ 57 ರಲ್ಲಿ ಸುಮಾರು 19 ಸಾವಿರ ರೈತರು ಅರ್ಜಿ ಹಾಕಿದ್ದರು. ಆದರೆ ಅವನ್ನು ಎಲ್ಲ ಡಿಸಿಗಳ ಆದೇಶದ ಮೇರೆಗೆ ತಿರಸ್ಕರಿಸಲಾಗಿದೆ ಎಂದು ತಿಳಿಸಲಾಗಿದೆ. ಆದರೆ ಸಚಿವರು ಅರ್ಹ ಫಲಾನುಭವಿಗಳ ಅರ್ಜಿ ತಿರಸ್ಕೃತ ಆಗಿದ್ದರೆ ವರದಿ ಕೊಡಿ, ಸರಿ ಪಡಿಸಲಾಗುವುದು ಎಂದಿದ್ದಾರೆ. ರೈತರು ಆನ್ ಲೈನ್ ಮೂಲಕ ಅರ್ಜಿ ಹಾಕಿರುವುದರಿಂದ ಹಣ ಸಹ ಕಟ್ಟಿದ್ದು, ಈ ಹಣ ಸರ್ಕಾರದ ಬಳಿ ಇದೆ. ಇದರಿಂದ ಸರ್ಕಾರಕ್ಕೆ ಆದಾಯ ಆಗಿದ್ದರೂ ನಿರ್ಲಕ್ಷ್ಯ ವಹಿಸುತ್ತಿರುವ ಸರ್ಕಾರ, ಈ ವಿಚಾರದಲ್ಲಿ ಸರ್ಕಾರ ಸ್ಪಷ್ಟ ನಿಲುವು ತಳೆಯಬೇಕು. ಇತ್ತೀಚೆಗೆ ಸರ್ಕಾರ ಭೂ ಗ್ಯಾರಂಟಿ ಸಮಾವೇಶ ಮಾಡಿತು. ಅದರಂತೆ ನಮೂನೆ 57 ರಲ್ಲಿ ಅರ್ಜಿ ಸಲ್ಲಿಸಿರುವ ರೈತರಿಗೆ ಸಾಗುವಳಿ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು.

ಹಾಗೆಯೇ ತಾಲೂಕಿನಲ್ಲಿರುವ ಗೋಮಾಳ ಸೇರಿ ಸರ್ಕಾರಿ ಜಾಗವನ್ನು ಅರಣ್ಯ ಇಲಾಖೆಗೆ ಖಾತೆ ಮಾಡಿಕೊಟ್ಟರೆ ತಾಲೂಕು ಕಚೇರಿ ಎದುರು ಧರಣಿ ಮಾಡುವ ಎಚ್ಚರಿಕೆಯನ್ನೂ ಅವರುಗಳು ನೀಡಿದರು.

ಜೆಜೆಎಂ ಕಾಮಗಾರಿ ಸರಿಯಾಗಿ ನಡೆದಿಲ್ಲ ಎಂದು ದೂರಿದ್ದು ಅದನ್ನು ಸರಿಪಡಿಸಬೇಕು. ನ್ಯಾಫೆಡ್ ಕೇಂದ್ರದ ಮೂಲಕ ಗುಣಮಟ್ಟದ ರಾಗಿ ಖರೀದಿ ಮಾಡಬೇಕು. ಮಧ್ಯವರ್ತಿಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ನಟರಾಜ್, ತಾಲ್ಲೂಕು ಉಪಾಧ್ಯಕ್ಷ ಗುರುಮೂರ್ತಿ, ರಾಜ್ಯ ಸಂಚಾಲಕ ಭರತ್, ಶಿವರಾಜ್ ಹಾಜರಿದ್ದರು.

### ಭಾರತ ತೈಲ ಖರೀದಿಸಿದರೆ ರಷ್ಯಾಗೆ ಲಾಭವಿಲ್ಲ: ಅಮೆರಿಕ

**ನ್ಯೂಯಾರ್ಕ್:** ಇರಾನ್‌ನೊಂದಿಗಿನ ಸಂಘರ್ಷದ ಮಧ್ಯೆ ಇಂಧನ ಪೂರೈಕೆಯನ್ನು ಖಚಿತಪಡಿಸಿ ಕೊಳ್ಳಲು ಅಮೆರಿಕವು ಭಾರತಕ್ಕೆ ಈಗಾಗಲೇ ಸಮುದ್ರದಲ್ಲಿರುವ ಹಡಗುಗಳಲ್ಲಿ ರಷ್ಯಾದ ತೈಲವನ್ನು ಸ್ವೀಕರಿಸಲು ತಾತ್ಕಾಲಿಕವಾಗಿ ಅನುಮತಿ ನೀಡಿದೆ ಮತ್ತು ಅಲ್ಪಾವಧಿಯ ಕ್ರಮವು ಮಾಸ್ಕೋಗೆ ಗಮನಾರ್ಹ ಆರ್ಥಿಕ ಪ್ರಯೋಜನವನ್ನು ನೀಡುವುದಿಲ್ಲ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್ ಅವರು ಹೇಳಿದ್ದಾರೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಮತ್ತು ಇಡೀ ರಾಷ್ಟ್ರೀಯ ಭದ್ರತಾ ತಂಡವು ಭಾರತದಲ್ಲಿರುವ ನಮ್ಮ ಮಿತ್ರರಾಷ್ಟ್ರಗಳು ಉತ್ತಮ ನಟರಾಗಿರುವುದರಿಂದ ಮತ್ತು ಈ ಹಿಂದೆ ಅನುಮೋದಿತ ರಷ್ಯಾದ ತೈಲವನ್ನು ಖರೀದಿಸುವುದನ್ನು ನಿಲ್ಲಿಸಿರುವುದರಿಂದ ಈ ನಿರ್ಧಾರಕ್ಕೆ ಬಂದಿದ್ದಾರೆ ಎಂದು ಲೀವಿಟ್ ಅವರು ಶ್ವೇತಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

## ನಕಲಿ ದಾಖಲೆ ಸೃಷ್ಟಿಸಿ ಜಾಗ ಕಬಳಿಕೆ ಯತ್ನ: ಪ್ರತಿಭಟನೆ

• ಪ್ರಜೋದಯ ವರದಿ



**ಬೇಲೂರು:** ತಾಲ್ಲೂಕಿನ ಬಿಕ್ಕೋಡು ಹೋಬಳಿ ಕೆಸಗೋಡು ಗ್ರಾಮ ಪಂಚಾಯಿತಿಗೆ ಸೇರಿದ ಆಲೂರು - ಬಿಕ್ಕೋಡು ಮುಖ್ಯ ರಸ್ತೆ ಬದಿಯಲ್ಲಿ ಗ್ರಾಮದ ಅಭಿವೃದ್ಧಿಗೆ ಹಲವು ವರ್ಷಗಳಿಂದ ಮೀಸಲಿಟ್ಟಿದ್ದ ಸರ್ಕಾರಿ ಗ್ರಾಮ ಠಾಣಾ ಜಾಗವನ್ನು ಗ್ರಾಮದ ಸವರ್ಣೀಯ ವ್ಯಕ್ತಿಯೊಬ್ಬರು ನಕಲಿ ದಾಖಲೆ ಸೃಷ್ಟಿಸಿ ಮನೆ ನಿರ್ಮಾಣ ಮಾಡಲು ಯತ್ನಿಸುತ್ತಿದ್ದು ಕೂಡಲೇ ಅದನ್ನು ತೆರವುಗೊಳಿಸಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಹಾಗೂ ನಿವೇಶನ ರಹಿತ ಕುಟುಂಬಗಳಿಗೆ ಮೀಸಲು ಮಾಡುವಂತೆ ಕೆಸಗೋಡು ನೀಲನಹಳ್ಳಿ ಗೌತಮನಗರ ಮೂಡ್ಲಗಿರಿ ಹಾಗೂ ಹಿರಿವಾಟೆ ಗ್ರಾಮಗಳ ಗ್ರಾಮಸ್ಥರು ಹಾಗೂ ದಲಿತ ಮುಖಂಡರು ಬುಧವಾರ ನಾಮಫಲಕ ಹಾಕಿ ಬೃಹತ್ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆಸಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪ್ರಕಾಶ್ ಅವರು, ಈ ವ್ಯಾಪ್ತಿಯ ಗ್ರಾಮಗಳಲ್ಲಿ ಸುಮಾರು 15 ಎಕರೆ ಸರ್ಕಾರಿ ಗ್ರಾಮ ಠಾಣಾ ಜಾಗವಿದ್ದು ಸರ್ವೆ ನಡೆಸಿ ವಸತಿ ರಹಿತ ಕುಟುಂಬಗಳಿಗೆ ಹಂಚಿಕೆ ಮಾಡುವಂತೆ ಹಲವು ಬಾರಿ ತಹಶೀಲ್ದಾರ್ ಹಾಗೂ ಗ್ರಾಮ ಪಂಚಾಯಿತಿಗೆ ಮನವಿ ಮಾಡಲಾಗಿತ್ತು. ಆದರೂ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಭಾಗದಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸ ಮಾಡುತ್ತಿದ್ದು ಅನೇಕ ಮಂದಿಗೆ ನಿವೇಶನ ಇಲ್ಲದೆ ಪರದಾಡುವ ಪರಿಸ್ಥಿತಿ ಎದುರಾಗಿದೆ ಅಧಿಕಾರಿಗಳು ಯಾವುದೇ ರಾಜಕೀಯ ಒತ್ತಡಕ್ಕೆ ಮಣಿಯದೆ ಬಡವರಿಗೆ ನಿವೇಶನ ಒದಗಿಸಬೇಕು ಹಾಗೂ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಜಾಗವನ್ನು ತೆರವುಗೊಳಿಸಿ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದ ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ಸತೀಶ್ ಕುಮಾರ್, ಗ್ರಾಮ ಠಾಣಾ ಜಾಗವು ಗ್ರಾಮ ಪಂಚಾಯಿತಿಗೆ ಸೇರಿದಾಗಿದ್ದು ಯಾವುದೇ ದಾಖಲಾತಿ ಇಲ್ಲದೆ ಕಟ್ಟಡ ನಿರ್ಮಾಣ ಮಾಡುವುದು ಕಾನೂನು ಬಾಹಿರವಾಗಿದೆ. ಈ ಸಮಸ್ಯೆಯನ್ನು ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ಈ ಗ್ರಾಮ ಠಾಣಾ ಜಾಗವನ್ನು ಸರ್ವೆ ನಡೆಸಿ ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ಮೀಸಲು ಮಾಡುವವರೆಗೂ ಈ ಸ್ಥಳಕ್ಕೆ ಗ್ರಾಮದ ಯಾವುದೇ ವ್ಯಕ್ತಿಗಳು ಅತಿಕ್ರಮ ಪ್ರವೇಶ ಮಾಡದಂತೆ ಇಂದಿನಿಂದ ನಿರ್ಬಂಧಿಸಲಾಗಿದ್ದು ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ಕೈ ಬಿಡಲಾಯಿತು.

ಉಮೇಶ್, ಎಚ್.ಡಿ.ರಾಜು. ಈರಪ್ಪ. ತುಂಗರಾಜು, ಕುಮಾರ್, ರವಿ, ರಾಕೇಶ್, ರುದ್ರೇಶ್, ಗ್ರಾಮಸ್ಥರಾದ ಶಿವಪ್ಪ, ಜಗದೀಶ್, ಗೋವಿಂದ್, ಲಕ್ಷ್ಮಣ್, ಪ್ರಸನ್ನ. ಸೋಮಶೇಖರ್, ಸುನಿಲ್, ನಿಂಗಪ್ಪ ಇತರರು ಹಾಜರಿದ್ದರು.

## ನೂತನ ಅಧ್ಯಕ್ಷರಾಗಿ ರಾಮೇಗೌಡ ಆಯ್ಕೆ

• ಪ್ರಜೋದಯ ವರದಿ



**ಆಲೂರು:** ಪ್ರಾಥಮಿಕ ಕೃಷಿ ಸಹಕಾರ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಜಿ.ಆರ್. ರಾಮೇಗೌಡ ಅವರು ಅವಿರೋಧವಾಗಿ ಆಯ್ಕೆಯಾದರು.

ಈವರೆಗೆ ಅಧ್ಯಕ್ಷರಾಗಿದ್ದ ಬಿ.ಎಲ್. ಲಿಂಗರಾಜು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ, ಎಲ್ಲಾ ನಿರ್ದೇಶಕರು ಜಿ. ಆರ್. ರಾಮೇಗೌಡರನ್ನು ಅವಿರೋಧವಾಗಿ ಆಯ್ಕೆ ಮಾಡಿದರು.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಶಾಂತಕೃಷ್ಣ, ಬಿ ಲಿಂಗರಾಜು, ಎಂ ಎಚ್ ರಂಗೇಗೌಡ, ರಂಗಯ್ಯ, ಜಗದೀಶ್, ವ್ಯವಸ್ಥಾಪಕ ಯಲ್ಲಪ್ಪ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದರು.


### ಸಾರ್ವಜನಿಕ ತಿಳುವಳಿಕೆ ಪತ್ರ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ, ಶ್ರೀ ಎಸ್ ಹೆಚ್ ಸ್ವಾಮಿ, ಬಿನ್ ಹೊನ್ನೇಗೌಡ, ಸುಮಾರು 48 ವರ್ಷ ವಯಸ್ಸು, ಶ್ರೀ ಭಾಸ್ಕರ್ ಎಸ್, ಬಿನ್ ಎಸ್ ಹೆಚ್ ಸ್ವಾಮಿ, ಸುಮಾರು 21 ವರ್ಷ ವಯಸ್ಸು ಮತ್ತು ಶ್ರೀಮತಿ ಗೌರಮ್ಮ ಕೋಂ ಎಸ್ ಹೆಚ್ ಸ್ವಾಮಿ ಸುಮಾರು 47 ವರ್ಷ ವಯಸ್ಸು ಎಲ್ಲರ ವಾಸ ಸಂಕೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಾಪುರ ಹಾಸನ ರವರುಗಳಿಗೆ ಸೇರಿದ ಈ ಕೆಳಗೆ ನಮೂದಿಸಿರುವ ಆಸ್ತಿಗೆ ಸಂಬಂದಪಟ್ಟಂತಹ ಈ ಕೆಳಗೆ ನಮೂದಿಸಿರುವ ಶುದ್ಧ ಕ್ರಯ ಪತ್ರವನ್ನು, ಹಾಸನದ ಮಹಾವೀರ ಸರ್ಕಲ್ ಬಳಿ ಕಳೆದುಕೊಂಡಿರುತ್ತಾರೆ. ಸದರಿ ವಿಚಾರ ವಾಗಿ ಒಂದು ದೂರನ್ನು ದಾಖಲಿಸಿದ್ದು, ಪೊಲೀಸ್ ಕಚೇರಿ ಹಾಸನ ವಿಭಾಗದವರು ದಿನಾಂಕ 22-12-2025 ರಲ್ಲಿ ಆನ್ಲೈನ್ ರಿಪೋರ್ಟ್ ಅನ್ನು ನೀಡಿರುತ್ತಾರೆ.

ಕಳೆದುಹೋಗಿರುವ ದಾಖಲಾತಿಯ ವಿವರ

ದಿನಾಂಕ 14-03-2024 ರಂದು ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಹಾಸನದವರು ಶ್ರೀ ಎಸ್ ಹೆಚ್ ಸ್ವಾಮಿ ಉರುಫ್ ಸ್ವಾಮಿ, ಶ್ರೀ ಭಾಸ್ಕರ್ ಎಸ್, ಮತ್ತು ಶ್ರೀಮತಿ ಗೌರಮ್ಮ ರವರುಗಳಿಗೆ ಹಾಸನ ಉಪನೋಂದಣಾಧಿಕಾರಿ ಕಛೇರಿಯ ದಸ್ತಾವೇಜು ನಂಬರ್ 17452/2023-24 ನಂಬರಾಗಿ ನೋಂದಾವಣೆಯಾಗಿ ರುವ ನೋಂದಾಯಿತ ಕ್ರಯ ಪತ್ರ ದಿನಾಂಕ 15-02-2024.

ಸ್ವತ್ತಿನ ವಿವರ:

ಹಾಸನ ಜಿಲ್ಲೆ, ಹಾಸನ ನಗರ, ನಂ 825, ಎಸ್ ಎಂ ಕೆ ನಗರ, ಬೂವನಹಳ್ಳಿ ಹಾಸನದಲ್ಲಿ ರುವ, ಹಾಸನ ನಗರಸಭೆ ವ್ಯಾಪ್ತಿಗೊಳಪಟ್ಟಿರುವ, ವಾರ್ಡ್ ನಂ 1, ಎಸ್ ಎ ಎಸ್ ನಂ 2022, ಸ್ವತ್ತಿನ ಹಳೆ ಸಂಖೆ ಬೂವನಹಳ್ಳಿ ಗಾಮ ಪಂ ಎಸ್ ಎಂ ಕೃಷ್ಣಾ ನಗರ ನಿವೇಶನ ಸಂಖ್ಯೆ 2956, ಸ್ವತ್ತಿನ ಸಂಖೆ 1-8-1019-825 ಉಪನೋಂದಣಾಧಿಕಾರಿ ಕಛೇರಿ-ಹಾಸನ, ನಿವೇಶನದ ಅಳತೆ ಪೂರ್ವ ಪಶ್ಚಿಮ 15 ಮೀಟರ್ ಮತ್ತು ಉತ್ತರ ದಕ್ಷಿಣ 9 ಮೀಟರ್ ಒಟ್ಟು ವಿಸ್ತೀರ್ಣ 135 ಚದರ ಮೀಟರ್ ಅಳತೆವುಳ್ಳ ನಿವೇಶನ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ : ನಿವೇಶನ ಸಂಖ್ಯೆ 2923, ಪಶ್ಚಿಮಕ್ಕೆ : 9 ಮೀಟರ್ ರಸ್ತೆ, ಉತ್ತರಕ್ಕೆ : ನಿವೇಶನ ಸಂಖ್ಯೆ 2957, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 2955. ಈ ಮೇಲೆ ತಿಳಿಸಿರುವ ನೋಂದಾಯಿತ ಕ್ರಯ ಪತ್ರ ಯಾರಿಗಾದರು ಸಿಕ್ಕಿದ್ದಲ್ಲಿ/ಸದರಿ ನೋಂದಾಯಿತ ಕ್ರಯ ಪತ್ರದ ವಿಚಾರವಾಗಿ ಯಾರಿಗಾದರು ತಂಟೆ ತಕರಾರು ಇದ್ದಲ್ಲಿ ಕೂಡಲೆ(ಅಂದರೆ 7 ದಿನಗಳ ಒಳಗೆ) ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ.

ವಕೀಲರು: ಶ್ರೀ ಸಂಕೀರ್ತನ್ ಹೆಚ್.ಟಿ. (ವಕೀಲರು) ಕಛೇರಿ ವಿಳಾಸ: "ಸಂಪತಿ" ನಂ.651, 10 ಸಿ ನೇ ಕ್ರಾಸ್, ಕೆ.ಆರ್.ಪುರಂ, ಹಾಸನ-573201.

ಮೊ. ನಂ: 9481429528

### PUBLIC NOTICE

Under the instructions of my client Sri S H Swamy S/o Honne Gowda Aged about 48 years, Sri Bhaskar S S/o Sri SH Swamy Aged about 21 years and Smt Gowramma W/o Sri SH Swamy Aged about 47 years all are R/o Sankenahalli Village, Kasaba Hobli, Doddapura Hassan, the following Notice is issued for reference. My clients has lost the below stated original Registered Sale Deed pertaining to the schedule property stated below near Mahaveer Circle Hassan. Pertaining to the same, my client has registered an Online complaint and the office of Police Unit Hassan has issued an endorsement on dated 22-12-2025.

Details of lost Documents

Registered sale deed dated 15-02-2024 executed by Hassan Urban Development Authority (HUDA) Hassan represented by its Commissioner in favour of Sri. Baskar, Sri. Swamy @ S H Swamy and Smt. Gowramma registered before the office of the Sub Registrar Hassan registered as document No. 17452/2023-24 on dated 14-03-2024. Hence this notice is issued to the general public that if any objection is there from anybody or if anybody finds the above stated document they are at liberty to raise their objection within 07 days from the Publication of this Notice to the below stated address.

Schedule Property

All that Piece and Parcel in respect of Site property situated at 825, SMK Nagar, Buvanahalli, Hassan, within the limits of City Municipality Hassan, within the jurisdiction of Sub-registrar, Hassan, having a property ID No. 1-8-1019-825, SAS No. 2022, Site No. 2956, Ward No. 01 site measuring East to West 15.00 meters and North to South 9.00 meters = 135 Sq Meters and bounded by: East: Site No.2923, West: 9 meters road, North: Site No.2957, South: Site No.2955.

Advocate: Sri H.T. Sankeerthan B.A.L., LL.B. Advocate, Chambers @: "SAMPATHI", Door No 651, 10th C Cross, K.R. Puram, HASSAN.

Ph: 9481429528


### ಅನುದಾನ ನೀಡಲು ಶಾಸಕ ಸುರೇಶ್ ಸದನದಲ್ಲಿ ಮನವಿ

**ಬೇಲೂರು:** ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ನೀಡುವಂತೆ ಸದನದಲ್ಲಿ ಶಾಸಕ ಹೆಚ್. ಕೆ.ಸುರೇಶ್ ಮನವಿ ಮಾಡಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಅನುದಾನಕ್ಕೆ ಸದನದಲ್ಲಿ ಗಮನ ಸೆಳೆಯುವ ವೇಳೆ ಕ್ಷೇತ್ರದ ಸಮಸ್ಯೆಯನ್ನು ಪ್ರಸ್ತಾಪಿಸಿದ ಶಾಸಕ ಹೆಚ್.ಕೆ.ಸುರೇಶ್ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭಾವಿ ಸಿಎಂ ಎಂದು ಕರೆದ ಪ್ರಸಂಗ ನಡೆಯಿತು.

ಎತ್ತಿನಹೊಳೆ ಕಾಮಗಾರಿಯಿಂದ ರಸ್ತೆ ಸಂಪರ್ಕ ಇಲ್ಲ, ಹೀಗಾಗಿ ಅಭಿವೃದ್ಧಿ ಕುಂಠಿತ ಆಗಿದೆ. ಎತ್ತಿನಹೊಳೆ ಯೋಜನೆ ನೀರು ಬರೋದು ನನ್ನ ಕ್ಷೇತ್ರ ಬೇಲೂರು ವ್ಯಾಪ್ತಿಯಿಂದ. ರಸ್ತೆ ಅಭಿವೃದ್ಧಿಗೆ 500 ಕೋಟಿ ಕೇಳಿದ್ದಕ್ಕೆ 50 ಕೋಟಿ ಬರೆದಿದ್ದಾರೆ ಭಾವಿ ಮುಖ್ಯಮಂತ್ರಿಗಳು ಮುಂದಿನ ದಿನಗಳಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಡುವ ಭರವಸೆ ಇದೆ ಈಗ ಸದ್ಯಕ್ಕೆ ಕೂಡಲೇ ಅವರು ಬರೆದಿರುವ ಹಾಗೆ 50 ಕೋಟಿ ರೂ. ಬಿಡುಗಡೆ ಮಾಡಿ ಎಂದು ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

### ಮಗುವಿನ ಕಲಿಕಾ ಆಸಕ್ತಿಗೆ ಅನುಗುಣವಾದ ವಿದ್ಯೆಯನ್ನು ಕಲಿಸುವ ಕೆಲಸವಾಗಬೇಕು

## ಮಕ್ಕಳಿಗೆ ಕಲಿಕಾ ಆಸಕ್ತಿಯಿರುವ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳನ್ನು ಬರೀ ಪಠ್ಯದ ಕಲಿಕೆಗಷ್ಟೆ ಬಲವಂತವಾಗಿ ದೂಡುವ ಬದಲು ಅವರ ಕಲಿಕಾ ಆಸಕ್ತಿ ಯಾವುದು ಎಂಬುದರ ಕುರಿತಾಗಿ ತಿಳಿದು ಆ ಕ್ಷೇತ್ರದಲ್ಲಿ ಹೆಚ್ಚು ಕಲಿಯಲು ಅವಕಾಶ ಮಾಡಿಕೊಟ್ಟಾಗ ಮಕ್ಕಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹಿರಿಸಾವೆ ಸಾಯಿ ಸಿದ್ದಾಶ್ರಮದ ಮುಖ್ಯಸ್ಥರಾದ ಗುರುಮೂರ್ತಿ ಗುರೂಜಿ ಅವರು ತಿಳಿಸಿದರು.

ತಾಲ್ಲೂಕಿನ ಶ್ರವಣಬೆಳಗೊಳ ಹೋಬಳಿ ದಮ್ಮನಿಂಗಳ ಗ್ರಾಮದಲ್ಲಿರುವ ರಚನಾ ಪಬ್ಲಿಕ್ ಸ್ಕೂಲ್‌ನ 2025-26ನೇ ಸಾಲಿನ ವಾರ್ಷಿಕೋತ್ಸವ ರಚನಾ ಚಿತ್ತಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳನ್ನು ಪ್ರತಿನಿತ್ಯ ಓದು ಎಂಬ ಒತ್ತಡ ಹಾಕುತ್ತಾರೆ. ಮಕ್ಕಳನ್ನು ಓದಿಸುವ ಜೊತೆಗೆ ಅವರಲ್ಲಿರುವ ಆಸಕ್ತಿಯನ್ನು ಗುರುತಿಸಿ ಆ ದಿಕ್ಕಿನಲ್ಲಿ ಪ್ರೋತ್ಸಾಹಿಸುವ ಕೆಲಸವಾಗಬೇಕು ಎಂದರು.



ಕ್ರೀಡೆ, ಸಂಗೀತ, ಕಲೆ, ನೃತ್ಯ ಸೇರಿದಂತೆ ಪಠ್ಯದಾಚೆಗಿನ ವಿದ್ಯೆಗಳಲ್ಲಿ ಮಕ್ಕಳನ್ನು ತೊಡಗಿಸಿ ಅತ್ಯುತ್ತಮವಾದ ಕಲಿಕೆಗೆ ಅವಕಾಶ ಮಾಡಿಕೊಟ್ಟಲ್ಲಿ ಅವರು ನಾಡಿನ ಆಸ್ತಿಗಳಾಗುತ್ತಾರೆ. ಇಂದು ಸಮಾಜದಲ್ಲಿ ಹತ್ತಾರು ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಪಟ್ಟಿಯಲ್ಲಿ ಮೊದಲಿಗರಾಗಿ ಸಿಗುವವರು ಗ್ರಾಮೀಣ ಪ್ರತಿಭೆಗಳು, ಗ್ರಾಮೀಣ ಮಕ್ಕಳಿಗಿರುವ ಗಟ್ಟಿತನ, ಆತ್ಮವಿಶ್ವಾಸ, ಸಾಧಿಸುವ ಛಲ ಪಟ್ಟಣದ ಮಕ್ಕಳಿಗೆ ಅಷ್ಟಾಗಿ ಇರುವುದಿಲ್ಲ, ಇಂದು ಶಾಲೆಗಳಲ್ಲಿ ನಡೆಯುವ ವಾರ್ಷಿಕೋತ್ಸವಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಉತ್ತಮ ವೇದಿಕೆಯಾಗಿದೆ. ಗ್ರಾಮೀಣ ಭಾಗದಲ್ಲಿ ಶಾಲೆ ತೆರೆದು ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಮುಂದಾಗಿರುವ ರಚನಾ ಸ್ಕೂಲ್‌ನ ಆಡಳಿತ ಮಂಡಳಿ ಕಾರ್ಯ ಮೆಚ್ಚುವಂತಹುದು ಎಂದು ಹೇಳಿದರು.

ಸುಳ್ಯ ಇಂಜನಿಯರಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಂ.ವಿ.ಕೃಷ್ಣರಾಜು ಮಾತನಾಡಿ, ಭಗವಂತ ನೀಡಿರುವ ಅಪರೂಪವಾದ ಮಾನವ ಜನ್ಮವನ್ನು ಸಾರ್ಥಕತೆಪಡಿಸಿಕೊಳ್ಳುವ ಕೆಲಸ ಮಾಡಬೇಕು, ತಾವು ಬೆಳೆದು ಇತರರನ್ನು ಬೆಳೆಸುವ ಗುಣ ಬೆಳೆಸಿಕೊಳ್ಳಬೇಕು. ನಮ್ಮಗಳ ಭವಿಷ್ಯಕ್ಕೆ ಕಾರಣವಾಗುವ ಪೋಷಕರು ಮತ್ತು ಗುರುಗಳ ಋಣ ತೀರಿಸುವ ಕೆಲಸ ಮಾಡಬೇಕೆಂದರು. ಸ್ವಾಮಿ ವಿವೇಕಾನಂದರು ಹೇಳಿರುವಂತೆ ಅನ್ನ ಕೊಟ್ಟರೆ ಒಂದು ದಿನ ನೆರವಾದಂತೆಮ ಹಣ ನೀಡಿದರೇ ಕೆಲವು ದಿನ ಸಹಾಯ ಮಾಡಿದಂತೆ, ವಿದ್ಯೆ ನೀಡಿ ಅರಿವು ಮೂಡಿಸಿದರೇ ಶಾಶ್ವತ ಸಹಾಯವಂತೆ ಎನ್ನುವ ರೀತಿಯಲ್ಲಿ ರಚನಾ ಶಾಲೆ ಸ್ಥಾಪಿಸಿ ಪ್ರಕಾಶ್ ಮತ್ತು ಸುನೀತಾ ಪ್ರಕಾಶ್ ಆ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ರಚನಾ ಚಿತ್ತಾರ ವಾರ್ಷಿಕೋತ್ಸವದಲ್ಲಿ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಮಕ್ಕಳಿಗೆ ಬಹುಮಾನ ನೀಡಲಾಯಿತು. ಆದೇ ರೀತಿ ಪೋಷಕರ ಕ್ರೀಡಾಕೂಟದಲ್ಲಿ ಭಾಗಿಯಾಗಿ ಗೆದ್ದವರಿಗೆ ಗಣ್ಯರಿಂದ ಬಹುಮಾನ ವಿತರಣೆ ಮಾಡಲಾಯಿತು. ನಂತರ ನಡೆದ ಮಕ್ಕಳ ನೃತ್ಯ, ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಪೇಕ್ಷಕರನ್ನು ಮನಸೂರೆಗೊಳಿಸಿತ್ತು. ಮಕ್ಕಳ ಮನರಂಜನೆಯ ಜೊತೆಗೆ ಗಾಯಕ ದಂಪತಿಎಂ.ವಿ.ಕೃಷ್ಣರಾಜ್, ಮತ್ತು ಪೂರ್ಣಿಮ ಕೃಷ್ಣರಾಜ್ ರವರು ಚಲನಚಿತ್ರ ಗೀತೆಗಳನ್ನಾಡಿ ಪೇಕ್ಷಕರನ್ನು ರಂಜಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಶ್ರವಣಬೆಳಗೊಳ ಶ್ರೀನಿವಾಸ್, ರಚನಾ ಪಬ್ಲಿಕ್ ಸ್ಕೂಲ್‌ನ ಸಂಸ್ಥಾಪಕ ಹೆಚ್.ಟಿ.ಪ್ರಕಾಶ್, ಸಂಸ್ಥೆಯ ಅಧ್ಯಕ್ಷೆ ಬಿ.ಆರ್.ಸುನೀತಾ ಪ್ರಕಾಶ್, ಆಡಳಿತಾಧಿಕಾರಿ ಎನ್.ಎನ್.ಮಂಜುನಾಥ್, ಪ್ರಾಂಶುಪಾಲೆ ಸವಿತಾ ಪ್ರಸಾದ್, ಜ್ಞಾನೇಶ್, ಮಹೇಶ್, ಶಿವರಾಜ್ ಇನ್ನಿತರರು ಹಾಜರಿದ್ದರು.




ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸೋಲು

## ಪ್ರತಿಪಕ್ಷಗಳಿಗೆ ಮುಖಭಂಗ | ಸಂಸತ್ ಕಲಾಪದಲ್ಲಿ ಹೈಡ್ರಾಮಾ

• ಪ್ರಜೋದಯ ವರದಿ



**ನವದೆಹಲಿ:** ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ಬುಧವಾರ ಧ್ವನಿ ಮತದ ಮೂಲಕ ಸೋಲಿಸಲಾಯಿತು.

ಫೆಬ್ರವರಿಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯ ಸಮಯದಲ್ಲಿ ಪ್ರತಿಪಕ್ಷಗಳ ಸದಸ್ಯರಿಗೆ ಸಂಸತ್ತಿನಲ್ಲಿ ಮಾತನಾಡಲು ಅವಕಾಶ ನೀಡಲಿಲ್ಲ ಮತ್ತು ಪಕ್ಷಪಾತಿಯಾಗಿ ವರ್ತಿಸುತ್ತಿದ್ದಾರೆಂದು ಆರೋಪಿಸಿ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿದ್ದವು.

ಮಂಗಳವಾರ ಲೋಕಸಭೆಯಲ್ಲಿ ಸ್ಪೀಕರ್ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಆರಂಭಿಸಿ ಮಾತನಾಡಿದ ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಅವರು, ಸಂವಿಧಾ ನವನ್ನು ಉಳಿಸಲು ಮತ್ತು ಸದನದ ಗೌರವ ಕಾಪಾಡಲು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ವಿರೋಧ ಪಕ್ಷಗಳು ನಿರ್ಣಯ ಮಂಡಿಸ ಬೇಕಾಯಿತೆಂದು ಹೇಳಿದ್ದರು.

ಎರಡು ದಿನ ನಡೆದ ಚರ್ಚೆಯ ನಂತರ ಪ್ರತಿಪಕ್ಷಗಳ ಪ್ರತಿಭಟನೆ ಮತ್ತು ಘೋಷಣೆಗಳ ನಡುವೆ, ಸ್ಪೀಕರ್ ಸ್ಥಾನದಲ್ಲಿದ್ದ ಜಗದಾಂಬಿಕಾ ಪಾಲ್ ಅವರು ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಿದರು. ವಿಪಕ್ಷಗಳು ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವಂತೆ ಪಾಲ್ ಒತ್ತಾಯಿಸಿದರು. ಆದರೆ, ಪ್ರತಿಭಟನೆಗಳು ಮುಂದುವರಿದಂತೆ ಅವರು ಸದನದ ಮತವನ್ನು ಕೋರಿದರು. ನಿರ್ಣಯವನ್ನು ಧ್ವನಿ ಮತದಿಂದ ತಿರಸ್ಕರಿಸಲಾಯಿತು ಎಂದು ಘೋಷಿಸಿದರು. ನಂತರ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

**ರಾಹುಲ್ ಭಾಷಣಕ್ಕೆ 20 ಸಲ ಅಡ್ಡಿ**

ಸ್ಪೀಕರ್ ವಿರುದ್ಧ ನಿರ್ಣಯ ಮಂಡಿಸಲು ಹಲವು ಕಾರಣಗಳನ್ನು ನೀಡಿದ ಕಾಂಗ್ರೆಸ್ ಸಂಸದ ಗೌರವ್‌ಗೊಗೊಯ್ ನೀಡಿದರು. ಫೆಬ್ರವರಿ ಯಲ್ಲಿ ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲೆ ಲೋಕಸಭೆ ಪ್ರತಿಪಕ್ಷ ನಾಯಕ ಮಾತನಾಡಲು ಬಯಸಿದಾಗ ಸ್ಪೀಕರ್, ಅಧ್ಯಕ್ಷರ ಸಮಿತಿಯ ಸದಸ್ಯರು, ಖಜಾನೆ ಪೀಠಗಳ ಹಿರಿಯ ಸದಸ್ಯರು ಅವರಿಗೆ 20 ಬಾರಿ ಅಡ್ಡಿಪಡಿಸಿದರೆಂದು ಆರೋಪಿಸಿದರು.

ಸ್ಪೀಕರ್, ರಾಹುಲ್ ಗಾಂಧಿ ಮಾತನಾಡಲು ಅವಕಾಶ ನೀಡಲಿಲ್ಲ. ಸದನ ಮತ್ತು ದೇಶದ ಜನರಿಗೆ ತಿಳಿದಿರಬೇಕಾದ ಕೆಲವು ನಿರ್ಣಾಯಕ ವಿಷಯಗಳನ್ನು ಕಡ್ಡಾಯವಾಗಿ ಮಂಡಿಸಲು ಪ್ರಯತ್ನಿಸುವಾಗ ಎಲ್‌ಒಪಿಗೆ ಪದೇ ಪದೇ ಅಡ್ಡಿಪಡಿಸಲಾಯಿತು ಎಂದು ಗೊಗೊಯ್ ಹೇಳಿದರು. ಮಾಜಿ ಸೇನಾ ಮುಖ್ಯಸ್ಥ ಎಂಎಂ ನರವಾಣೆ ಅವರ ಬಿಡುಗಡೆಯಾಗದ ಪುಸ್ತಕದಲ್ಲಿ ಅವರ ಹೇಳಿಕೆ ಬಗ್ಗೆ ಮಾತನಾಡಲು ರಾಹುಲ್ ಗಾಂಧಿಯವರು ಬಯಸಿದ್ದರು. ಅದಕ್ಕೂ ಅವಕಾಶ ನೀಡಲಿಲ್ಲ ಎಂದರು.

ಈ ಹಂತದಲ್ಲಿ ಸ್ಪೀಕರ್ ಸ್ಥಾನದಲ್ಲಿದ್ದ ಜಗದಾಂಬಿಕಾ ಪಾಲ್ ಅವರು, ಬಿರ್ಲಾ ವಿರುದ್ಧದ ನಿರ್ಣಯದ ಬಗ್ಗೆ ಮಾತ್ರ ಚರ್ಚಿಸುವಂತೆ ಗೊಗೊಯ್ ಅವರಿಗೆ ಸೂಚಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು, ಇದು ಸ್ಪೀಕರ್ ಕುರಿತ ಚರ್ಚೆಯಾಗಿದ್ದು, ವಿರೋಧ ಪಕ್ಷಗಳು ಇತರ ವಿಷಯಗಳ ಬಗ್ಗೆ ಮಾತನಾ ಡುತ್ತಿದ್ದರೆ, ನಾವು ಉತ್ತರಿಸುತ್ತೇವೆ. ಆದರೆ ನೀವು ಅಡ್ಡಿಪಡಿಸಬಾರದು ಎಂದು ಹೇಳಿದರು.

ಅದಕ್ಕೆ ತಿರುಗೇಟು ನೀಡಿದ ಗೊಗೊಯ್, ಸಂಶೋಧನಾ ವರದಿಗಳ ಪ್ರಕಾರ ಸಂಸತ್ತಿನ ಕಲಾಪಗಳ ಪ್ರತಿಗಳನ್ನು ಪರಿಶೀಲಿಸಿದರೆ, ವಿರೋಧ ಪಕ್ಷದ ಸದಸ್ಯರಿಗೆ ಅತಿ ಹೆಚ್ಚು ಬಾರಿ ಅಡ್ಡಿಪಡಿಸಿರುವುದು ಕಿರಣ್ ರಿಜಿಜು ಅವರೇ ಎಂಬುದು ತಿಳಿಯುತ್ತದೆ ಎಂದರು.

**ಪ್ರತಿಪಕ್ಷ ಈ ಹಿಂದೆಯೂ ಇರಲಿಲ್ಲ**

ಅದಕ್ಕೆ ಗೃಹ ಸಚಿವ ಅಮಿತ್ ಶಾ ಅವರು ಪ್ರತಿಕ್ರಿಯಿಸಿ, ರಿಜಿಜು ಅವರು ಅತಿ ಹೆಚ್ಚು ಬಾರಿ ಅಡ್ಡಿಪಡಿಸಿದ್ದಾರೆಂಬುದು ನಿಜ. ಪ್ರಸ್ತುತ ಇರುವಂತಹ ವಿರೋಧ ಪಕ್ಷ ಈ ಹಿಂದೆ ಎಂದೂಇರಲಿಲ್ಲ ಎಂದು ಲೇವಡಿ ಮಾಡಿದರು.

ಸತತ ಅಡೆತಡೆಗಳ ನಂತರ ತಮ್ಮ ಭಾಷಣವನ್ನು ಮುಂದುವರಿಸಿದ ಗೌರವ್ ಗೊಗೊಯ್, ರಾಹುಲ್ ಗಾಂಧಿಯವರು ಅಮೇರಿಕಾದಲ್ಲಿ ಉದ್ಯಮಿಯೊಬ್ಬರ ವಿರುದ್ಧ ನಡೆಯುತ್ತಿರುವ ತನಿಖೆಯ ವಿಷಯವನ್ನು ಪ್ರಸ್ತಾಪಿಸಲು ಬಯಸಿದ್ದರು. ಈ ತನಿಖೆಯಲ್ಲಿ ಭಾರತದ ಸಚಿವರೊಬ್ಬರ ಹೆಸರನ್ನು ಸಹ ಉಲ್ಲೇಖಿಸಲಾಗಿದೆ, ಆದರೆ ಆ ವಿಷಯದ ಬಗ್ಗೆ ಮಾತನಾಡಲು ಅವರಿಗೆ ಅವಕಾಶ ನೀಡಲಿಲ್ಲ ವೆಂದರು. ರಾಹುಲ್ ಗಾಂಧಿಯವರು ಭಾರತ ದೊಂದಿಗೆ ಯುರೋಪಿಯನ್ ಯೂನಿಯನ್ ಮತ್ತು ಅಮೇರಿಕಾದ ನಡುವೆ ನಡೆಯುತ್ತಿರುವ ವ್ಯಾಪಾರ ಒಪ್ಪಂದಗಳ ಬಗ್ಗೆಯೂ ಮಾತನಾಡಲು ಬಯಸಿದ್ದರೆಂದು ಗೊಗೊಯ್ ಅವರು ಹೇಳಿದರು.


## ‘ಪ್ರಜೋದಯ’ ಒಡೆತನ ಮತ್ತಿತರ ವಿವರಗಳ ಹೇಳಿಕೆ

ಫಾರಂ 4 ನಿಯಮ (8)

| | | |
|---|---|---|
| 1. ಪ್ರಕಟಣೆಯ ಸ್ಥಳ | : | ಹಾಸನ |
| 2. ಪ್ರಕಟಣೆಯ ನಿಯತ ಕಾಲಿಕ | : | ದೈನಿಕ |
| 3. ಪ್ರಕಾಶಕರು | : | ಜೆ.ಆರ್.ಕೆಂಚೇಗೌಡ ಅವರು |
| 4. ಭಾರತದ ಪ್ರಜೆಯೇ ? | : | ಹೌದು |
| 5. ಅವರ ವಿಳಾಸ | : | ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ, ಹಾಸನ. |
| 6. ಮುದ್ರಕರ ಹೆಸರು ಮತ್ತು ವಿಳಾಸ | : | ಪ್ರಜೋದಯ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ, ಹಾಸನ. |
| 7. ಸಂಪಾದಕರ ಹೆಸರು | : | ಜೆ.ಆರ್.ಕೆಂಚೇಗೌಡ ಅವರು |
| 8. ಭಾರತದ ಪ್ರಜೆಯೇ ? | : | ಹೌದು |
| 9. ಅವರ ವಿಳಾಸ | : | ವಿವೇಕಾನಂದ ರಸ್ತೆ, ವಿದ್ಯಾನಗರ, ಹಾಸನ. |

10. ಪತ್ರಿಕೆಯ ಮಾಲೀಕತ್ವ ಹೊಂದಿರುವ ವ್ಯಕ್ತಿಗಳು ಹಾಗು ಒಟ್ಟು ಬಂಡವಾಳದಲ್ಲಿ ಶೇ.1ಕ್ಕಿಂತ ಹೆಚ್ಚು ಭಾಗ ಹೊಂದಿರುವ ಪಾಲುದಾರರು ಅಥವಾ ಷೇರುದಾರರ ಹೆಸರು ಮತ್ತು ವಿಳಾಸ

–ಜೆ.ಆರ್.ಕೆಂಚೇಗೌಡ, ವಿದ್ಯಾನಗರ, ಹಾಸನ.

ಜೆ.ಆರ್.ಕೆಂಚೇಗೌಡ ಆದ ನಾನು ಈ ಮೂಲಕ ಘೋಷಿಸುವುದೇನೆಂದರೆ, ಮೇಲೆ ನೀಡಿದ ವಿವರಗಳು ನನ್ನ ತಿಳುವಳಿಕೆಯಂತೆ ಸತ್ಯವಾಗಿದೆ.

ಸ್ಥಳ : ಹಾಸನ
ದಿನಾಂಕ : 12–3–2026

ಜೆ.ಆರ್.ಕೆಂಚೇಗೌಡ
ಪ್ರಕಾಶಕರು


## ಮೃತ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರಕ್ಕೆ ಮನವಿ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬಾಳ್ಳುಪೇಟೆ ಸಮೀಪದ ಓಂ ನಗರದಲ್ಲಿ ಕೆರೆಯಲ್ಲಿ ಮುಳುಗಿ ಮೃತಪಟ್ಟ ಇಬ್ಬರು ವಿದ್ಯಾರ್ಥಿಗಳ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ನೀಡ ಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಓಂ ನಗರದ ನಿವಾಸಿಗಳಾದ ಮಿಥುನ್ (17) ಹಾಗು ಭರತ್ (17) ಮಾ.7ರಂದು ಜಾನುವಾರು ಮೇಯಿಸಲು ತೆರಳಿದ್ದ ವೇಳೆ ಗ್ರಾಮ ಸಮೀಪದ ಕೆರೆ ಬಳಿ ಕಾಲು ಜಾರಿ ಬಿದ್ದು ಮುಳುಗಿ ಮೃತಪಟ್ಟಿದ್ದರು. ಪಿಯುಸಿ ಓದುತ್ತಿದ್ದ ಮಕ್ಕಳ ಅಗಲಿ ಕೆಯಿಂದ ಕುಟುಂಬದಲ್ಲಿ ನೀರವ ಮೌನ ಆವರಿಸಿದೆ. ಕುಟುಂಬದ ಭವಿಷ್ಯದ ಆಶಾಕಿರಣವಾಗಿದ್ದ ಇಬ್ಬರ ಸಾವಿನಿಂದ ಅವರ ಕುಟುಂಬಗಳು ಆರ್ಥಿಕ ಹಾಗು ಮಾನಸಿಕ ಸಂಕಷ್ಟಕ್ಕೆ ಸಿಲುಕಿವೆ. ಹೀಗಾಗಿ ಮಾನವೀಯ ದೃಷ್ಟಿಯಿಂದ ಪ್ರಕರಣವನ್ನು ಪರಿ ಗಣಿಸಿ ಅವರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರ ಮಂಜೂರು ಮಾಡುವಂತೆ ಕೋರಿದ್ದಾರೆ.

## ಛತ್ತೀಸ್‌ಗಢದಲ್ಲಿ 108 ನಕ್ಸಲರು ಶರಣು

• ಪ್ರಜೋದಯ ವರದಿ

**ಜಗದಲ್‌ಪುರ (ಛತ್ತೀಸ್‌ಗಢ):** ಎಡಪಂಥೀಯ ಉಗ್ರವಾದದ ವಿರುದ್ಧ ಸರ್ಕಾರ ನಡೆಸುತ್ತಿರುವ ಹೋರಾಟದ ಗಮನಾರ್ಹ ಯಶಸ್ಸಿನಲ್ಲಿ, 3.95 ಕೋಟಿ ರೂ. ಗಳ ಸಾಮೂಹಿಕ ಬಹುಮಾನವನ್ನು ಹೊಂದಿದ್ದ 108 ಮಾವೋವಾದಿಗಳು ಛತ್ತೀಸ್‌ಗಢದ ಬಸ್ತಾರ್ ಜಿಲ್ಲೆಯಲ್ಲಿ ಶರಣಾಗಿದ್ದಾರೆ.

ಇದಲ್ಲದೆ ಮಾವೋವಾದಿಗಳ ಅಡಗುತಾಣಗಳಿಂದ ಬೃಹತ್ ಪ್ರಮಾಣದ ಶಸ್ತ್ರಾಸ್ತ್ರಗಳ ಜೊತೆಗೆ, ಸುಮಾರು 3.61 ಕೋಟಿ ರೂ. ನಗದು ಮತ್ತು 1.64 ಕೋಟಿ ರೂ. ಮೌಲ್ಯದ ಒಂದು ಕೆಜಿ ಚಿನ್ನವನ್ನು ವಶಪಡಿಸಿಕೊಳ್ಳಲಾಗಿದೆ. ಇದು ದೇಶದಲ್ಲಿ ನಕ್ಸಲ್ ವಿರೋಧಿ ಕಾರ್ಯಾಚರಣೆಗಳ ಇತಿಹಾಸದಲ್ಲಿ ಒಂದೇ ಸ್ಥಳದಿಂದ ಅತಿ ಹೆಚ್ಚು ನಗದು ಮತ್ತು ಬೆಲೆಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಬಸ್ತಾರ್ ರೇಂಜ್‌ನ ಐಜಿಪಿ ಸುಂದರರಾಜ್ ಪಟ್ಟಿಲಿಂಗಮ್ ತಿಳಿಸಿದ್ದಾರೆ.

## ಹೊರ್ಮುಜ್ ಜಲಸಂಧಿ ಬಂದ್: ಸಂಕಷ್ಟ ಅಧಿಕ

» ಮೊದಲನೇ ಪುಟದಿಂದ

ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರೊಂದಿಗೆ ದೂರವಾಣಿ ಸಂಭಾ ಷಣೆ ನಡೆದಿದೆ. ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಸಂಬಂಧಿತ ರಾಜತಾಂತ್ರಿಕ ಪ್ರಯತ್ನಗಳ ಕುರಿತು ನಮ್ಮ ಮೌಲ್ಯ ಮಾಪನಗಳನ್ನು ಹಂಚಿಕೊಂಡಿದ್ದೇವೆ. ದ್ವಿಪಕ್ಷೀಯ ಸಹಕಾರ ಕಾರ್ಯ ಸೂಚಿಯನ್ನು ಸಹ ಪರಿಶೀಲಿಸಿದ್ದೇವೆಂದು ಜೈಶಂಕರ್ ಅವರು ಪ್ರತಿಕ್ರಿಯಿಸಿದ್ದಾರೆ.

ಇಂಧನ ಮಾರುಕಟ್ಟೆಯಲ್ಲಿನ ಅಡೆತಡೆಗಳನ್ನು ಗಮನದಲ್ಲಿ ಟ್ಟುಕೊಂಡು ಭಾರತೀಯ ಸಂಸ್ಕರಣಾಗಾರರು ರಷ್ಯಾದ ತೈಲವನ್ನು ಖರೀದಿಸಲು ಭಾರತೀಯ ಸಂಸ್ಕರಣಾಗಾರಗಳಿಗೆ ಅವಕಾಶ ನೀಡಲು ನವದೆಹಲಿಗೆ ತಾತ್ಕಾಲಿಕ 30 ದಿನಗಳ ವಿನಾಯಿತಿ ನೀಡುತ್ತಿರುವುದಾಗಿ ಯುನೈಟೆಡ್ ಸ್ಟೇಟ್ಸ್ ಹೇಳಿದ ಕೆಲವು ದಿನಗಳ ನಂತರ ಜೈಶಂಕರ್–ಲಾವ್ರೊವ್ ಸಂಭಾಷಣೆ ನಡೆಯಿತು. ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಅದರ ಪರಿಣಾಮಗಳ ಕುರಿತು ಯುರೋಪಿ ಯನ್ ಒಕ್ಕೂಟದ ವಿದೇಶಾಂಗ ವ್ಯವಹಾರ ಮತ್ತು ಭದ್ರತಾ ನೀತಿಯ ಉನ್ನತ ಪ್ರತಿನಿಧಿ ಕಲ್ಲಾಸ್ ಅವರೊಂದಿಗೆ ಉಪಯುಕ್ತ ಚರ್ಚೆ ನಡೆಸಿರುವುದಾಗಿ ವಿದೇಶಾಂಗ ಸಚಿವರು ಹೇಳಿದರು.



## ವಕೀಲರ ಪರಿಷತ್ ಚುನಾವಣೆ: ಶೇ.95ರಷ್ಟು ಮತದಾನ

• ಪ್ರಜೋದಯ ವರದಿ

**ಅರಸೀಕೆರೆ:** ನಗರದ ನ್ಯಾಯಾಲಯ ಸಂಕೀರ್ಣದಲ್ಲಿರುವ ವಕೀಲರ ಸಂಘದ ಕಚೇರಿ ಸಭಾಂಗಣದಲ್ಲಿ ನಡೆದ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ಶೇ.95ರಷ್ಟು ಮತದಾನವಾಯಿತು.

ಒಟ್ಟು 127 ಮತಗಳ ಪೈಕಿ 115 ಮತಗಳು ಚಲಾವಣೆಯಾಗಿದ್ದು, ಶಾಂತಿಯುತವಾಗಿ ಮತದಾನ ಪ್ರಕ್ರಿಯೆ ನಡೆಯಿತು. ಚುನಾವಣೆಯಲ್ಲಿ ಅರಸೀಕೆರೆ ವಕೀಲರ ಸಂಘದ ಸದಸ್ಯರು ಸಂಪೂರ್ಣವಾಗಿ ಭಾಗವಹಿಸಿ ತಮ್ಮ ಮತ ದಾನದ ಹಕ್ಕನ್ನು ಚಲಾಯಿಸಿದರು ಎಂದು ಸಂಘದ ಅಧ್ಯಕ್ಷ ಕೆ.ಜಿ.ಸದಾನಂದ ಅವರು ತಿಳಿಸಿದರು. ಪೋಲಿಂಗ್ ಅಧಿಕಾರಿಗಳಾದ ಎಸ್.ಕೆ.ಮಹದೇವಪ್ಪ, ಸಿದ್ದಮಲ್ಲಪ್ಪ, ಸಂಘದ ಕಾರ್ಯದರ್ಶಿ ಎಸ್.ಪ್ರಕಾಶ್, ಹಿರಿಯ ವಕೀಲರಾದ ಕೆ.ಎ.ರವಿಶಂಕರ್, ಕೆ.ಎಸ್.ಲೋಕೇಶ್ ಕುಮಾರ್, ಎಚ್.ಎಸ್.ಕೇಶವಮೂರ್ತಿ, ಬಿ.ಕೆ.ವಿವೇಕ್, ಕೆ.ವಿ.ಹಿರಿಯಣ್ಣಯ್ಯ ಮತ್ತಿತರರು ಭಾಗವಹಿಸಿದ್ದರು.

## ಜಿ.ಆರ್.ರಾಮೇಗೌಡ ಅವಿರೋಧ ಆಯ್ಕೆ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಿ.ಆರ್.ರಾಮೇಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ವೇಳೆ ಮಾತನಾಡಿದ ನೂತನ ಅಧ್ಯಕ್ಷರು, ಸಂಘದ ಎಲ್ಲಾ ನಿರ್ದೇಶಕರ ಸಹಕಾರದಿಂದ ನನಗೆ ಅಧ್ಯಕ್ಷ ಸ್ಥಾನ ಲಭಿಸಿದೆ. ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ರೈತರಿಗೆ ತಲುಪಿಸಲು ಪ್ರಾಮಾಣಿಕವಾಗಿ ಕಾರ್ಯನಿರ್ವ ಹಿಸುವುದಾಗಿ ಹೇಳಿದರು. ಉಪಾಧ್ಯಕ್ಷರಾದ ತುಳಸಮ್ಮ, ಮಾಜಿ ಅಧ್ಯಕ್ಷ ಬಿ.ಕೆ. ಲಿಂಗರಾಜು, ನಿರ್ದೇಶಕರಾದ ಹೆಚ್.ಸಿ. ಶಾಂತಕೃಷ್ಣ, ಹೆಚ್. ರಂಗೇಗೌಡ, ರಂಗಯ್ಯ (ಅಜೇನಹಳ್ಳಿ), ಎಂ.ಎ.ನಿಂಗರಾಜು, ಎಂ.ಕೆ. ಜಗದೀಶ್, ಧರಣೇಶ್, ನಿರಂಜನ್, ನಿಂಗಮ್ಮ ಉಪಸ್ಥಿತರಿದ್ದರು.



## ಇರಾನ್–ಇಸ್ರೇಲ್ ಸಂಘರ್ಷ: ಕಾಫಿ ರಫ್ತಿಗೆ ಸಂಕಷ್ಟ

» ಮೊದಲನೇ ಪುಟದಿಂದ

ಅರೇಬಿಕಾ ಚೆರಿ– 13,000 ರೂ., ರೊಬಸ್ಟಾ ಪಾರ್ಚ್‌ಮೆಂಟ್– 18,500 ರೂ., ರೊಬಸ್ಟಾ ಚೆರಿ– 9,500 ರೂ.ಗೆ ಏರಿಕೆಯಾಗಿದೆ. ಯುದ್ಧ ಪ್ರಾರಂಭವಾದ ನಂತರ 1200ರೂ. ವರೆಗೆ ಬೆಲೆ ಏರಿಕೆ ಕಂಡಿದೆ.

**ಖರೀದಿಗೆ ವರ್ತಕರ ಹಿಂದೇಟು:** ಯುದ್ಧದ ಪರಿಣಾಮ ದೊಡ್ಡ ದೊಡ್ಡ ವರ್ತಕರು ಕಾಫಿ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಭಾರತದಲ್ಲಿ ಉತ್ಪಾದನೆಯಾಗುವ ಕಾಫಿ ಹೆಚ್ಚಿನ ಪ್ರಮಾಣದಲ್ಲಿ ವಿದೇಶಗಳಿಗೆ ರಫ್ತು ಮಾಡು ವುದರಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಹಿವಾಟು ಸಂಘರ್ಷದ ಪರಿಣಾಮ ವ್ಯತ್ಯಯಗೊಂಡಿದೆ. ಸರಕು ತುಂಬಿದ ಹಡಗುಗಳ ಸಂಚಾರಕ್ಕೆ ಅಡ್ಡಿಯುಂಟಾಗಿರುವುದರಿಂದ ಹೆಚ್ಚಿನ ಕಾಫಿ ಕೂಡ ರಫ್ತಾಗುತ್ತಿಲ್ಲ. ಹೀಗಾಗಿ ವರ್ತಕರು ಕೂಡ ಖರೀದಿಗೆ ಹಿಂದೇಟು ಹಾಕು ತ್ತಿದ್ದಾರೆ. ಅದಕ್ಕೆ ಬೆಲೆ ಏರಿಳಿತವೂ ಕಾರಣವಾಗಿದೆ.

## ರಾಸು ಕಳವಿಗೆ ಬಂದು ರೈತನ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೊಟ್ಟಿಗೆಯಲ್ಲಿ ಕಟ್ಟಿದ್ದ ರಾಸುಗಳ ಕಳವಿಗೆ ಬಂದಿದ್ದ ದುಷ್ಕರ್ಮಿಗಳು ವ್ಯಕ್ತಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ತಾಲ್ಲೂಕಿನ ಮಾದಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಂಜೇಗೌಡ ಗಾಯಾಳು. ಮಾ.8ರ ಮಧ್ಯರಾತ್ರಿ 1.30ರ ಸಮಯದಲ್ಲಿ ಕೊಟ್ಟಿಗೆ ಸಮೀಪ ಪಿಕ್‌ಅಪ್ ವಾಹನದಲ್ಲಿ ಕಳ್ಳರು ಬಂದಿದ್ದಾರೆ. ಕೊಟ್ಟಿಗೆಯಲ್ಲಿ 4 ಹಸು ಹಾಗು ಹೋತಗಳಿದ್ದವು. ನಾಯಿಗಳು ಜೋರಾಗಿ ಕೂಗಿದ್ದರಿಂದ ಮಂಜೇಗೌಡ ಮತ್ತಿತರು ಬಂದಾಗ ಕೊಟ್ಟಿಗೆಯಿಂದ ಇಬ್ಬರು ಓಡಿ ಬಂದಿದ್ದಾರೆ. ವಾಹನ ಹತ್ತಿ ಹೋಗಲು ಯತ್ನಿಸಿದಾಗ ಚಾಲಕ ನನ್ನು ತಡೆದಿದ್ದಾರೆ. ಆಗ ಮತ್ತೊಬ್ಬ ಕಬ್ಬಿಣದ ರಾಡ್‌ನಿಂದ ಮಂಜೇಗೌಡರ ತಲೆಗೆ ಹೊಡೆದು ವಾಹನ ಹತ್ತಿದ್ದಾನೆ. ಚಾಲಕ ಜೋರಾಗಿ ವಾಹನ ಓಡಿಸಿದ್ದರಿಂದ ಹಿಂದಿನ ಚಕ್ರ ಕಾಲ ಮೇಲೆ ಹರಿದಿದೆ. ಸ್ಥಳೀಯರು ವಾಹನವನ್ನು ಅಡ್ಡಗಟ್ಟಿದ್ದರಿಂದ ಅದರಲ್ಲಿದ್ದ ಐದು ಜನರು ಓಡಿ ಹೋಗಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಸತಿ ಯೋಜನೆಗಾಗಿ ಕೃಷಿ ಭೂಮಿ ಸ್ವಾಧೀನ ಬೇಡ

• ಪ್ರಜೋದಯ ವರದಿ



**ಹಾಸನ:** ವಸತಿ ಯೋಜನೆಗಾಗಿ ತಾಲ್ಲೂಕಿನ ಹೂವಿನಹಳ್ಳಿ ಹಾಗು ಸುತ್ತಲಿನ ಜಮೀನು ಸ್ವಾಧೀನ ಪ್ರಕ್ರಿಯೆಯಿಂದ ಹಿಂದೆ ಸರಿಯಬೇಕೆಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೇಶ್ ಅವರು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಕರ್ನಾಟಕ ಗೃಹ ಮಂಡಳಿಯು ಹೂವಿನಹಳ್ಳಿ, ಹೂವಿನಹಳ್ಳಿ ಕಾವಲು ಸೇರಿ ಸುತ್ತಲಿನ 387 ಎಕರೆ ಜಮೀನನ್ನು ವಸತಿಗಾಗಿ ಸ್ವಾಧೀನ ಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ರೈತರ ಜೀವನಾ ಧಾರವಾಗಿರುವ ಜಮೀನನ್ನು ಕಸಿದುಕೊಳ್ಳುವುದು ಖಂಡನೀಯ. ಈಗಾಗಲೇ ಆ ಭಾಗದ ಜನರು ವಿವಿಧ ಯೋಜನೆಗಳಿಗೆಕೃಷಿಭೂಮಿ ಬಿಟ್ಟುಕೊಟ್ಟಿದ್ದಾರೆ. ಉಳಿದಿರುವ ಅಲ್ಪ ಸ್ವಲ್ಪ ಜಮೀನಿನಲ್ಲಿ ಕೃಷಿ ಚಟುವಟಿಕೆ ಮಾಡಿಕೊಂಡು ಜೀವನ ಮಾಡುತ್ತಿ ದ್ದಾರೆ. ಈಗ ಉಳಿದಿರುವ ಭೂಮಿ ಯನ್ನೂ ಕಳೆದುಕೊಂಡರೆ ಮುಂದೇನು ಮಾಡಬೇಕೆಂದು ಪ್ರಶ್ನಿಸಿದರು.

ಈ ಬಗ್ಗೆ ಸಂಬಂಧಪಟ್ಟವರು ಯೋಚಿಸಬೇಕು. ನಗರದ ಸುತ್ತಮುತ್ತ 250ಕ್ಕೂ ಹೆಚ್ಚು ಬಡಾವಣೆಗಳು ನಿರ್ಮಾಣವಾಗಿವೆ. ಕೆಲವು ನಿರ್ಮಾಣ ಹಂತದಲ್ಲಿವೆ. ಆ ನಿವೇಶನಗಳೇ ಮಾರಾಟವಾಗದೆ ಹಾಗೆಯೇ ಉಳಿದಿವೆ. ಆದರೂ ಹೊಸ ಬಡಾವಣೆ ನಿರ್ಮಾಣ ಮಾಡಲು ಮುಂದಾಗಿರುವ ಗೃಹಮಂಡಳಿಗೆ ರೈತರ ಕೃಷಿ ಜಮೀನು ಬೇಕಾ ಎಂದು ಪ್ರಶ್ನಿಸಿದರು.

ರೈತರ ಹೊಟ್ಟೆಯ ಮೇಲೆ ಹೊಡೆದು ಯಾವ ಪುರುಷಾರ್ಥಕ್ಕೆ ಅಭಿವೃದ್ಧಿ ಪಡಿಸಬೇಕು. ಅಭಿವೃದ್ಧಿ ಹೆಸರಿನಲ್ಲಿ ರೈತರ ಅನ್ನ ಕಿತ್ತುಕೊಳ್ಳಲು ಮುಂದಾಗಿರುವ ಗೃಹ ಮಂಡಳಿ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಆಗ್ರಹಿಸಿದರು.

ಜಮೀನು ನೀಡಲು ವಿರೋಧಿಸಿರುವ ರೈತರು ಈಗಾಗಲೇ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ವಿರೋಧ ವ್ಯಕ್ತಪಡಿಸಿದ್ದಾರೆ. ಆಮ್ ಆದ್ಮಿ ಪಕ್ಷ ಸಹ ರೈತರ ಪರವಾಗಿ ನಿಂತು ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಿದೆಯೆಂದರು.

ಒಂದು ವೇಳೆ ಗೃಹ ಮಂಡಳಿ ಹಠಕ್ಕೆ ಬಿದ್ದು ಜಮೀನು ಪಡೆಯಲು ಮುಂದಾದರೆ ಗ್ರಾಮಸ್ಥರ ಜೊತೆ ನಿಂತು ಹೋರಾಟ ಮಾಡುತ್ತೇವೆ. ಅದೇ ಪ್ರದೇಶದ ಸುಮಾರು 900 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ಮಾಡಲು ಹುಡಾ ಚರ್ಚೆ ನಡೆಸಿದೆ ಎಂಬ ಮಾಹಿತಿ ಇದ್ದು, ಕೆಹೆಚ್‌ಬಿ ಹಾಗು ಹುಡಾ ಅವರ ನಡೆಯಿಂದ ರೈತರು ತತ್ತರಿಸಿದ್ದು, ಯಾವುದೇ ಕಾರಣಕ್ಕೂ ರೈತರ ಭೂಮಿ ಪಡೆಯ ಬಾರದು ಎಂದು ಎಚ್ಚರಿಸಿದರು.

**ತಪ್ಪು ಮಾಡಿದ್ದರೆ ಕ್ರಮ ಜರುಗಿಸಿ**

ವಿನಾ: ಕಾರಣ ನನ್ನ ವಿರುದ್ಧ ಮಹಾನಗರ ಪಾಲಿಕೆ ಪರಿಸರ ಇಂಜಿನೀಯರ್ ಕವಿತಾ ಇಲ್ಲಸಲ್ಲದ ಆರೋಪ ಮಾಡುತ್ತಿದ್ದು, ನನ್ನ ಮನೆಗೆ ಮೂರು ನಲ್ಲಿ ಸಂಪರ್ಕ ಪಡೆದಿದ್ದೇನೆಂದು ಹೇಳುತ್ತಿದ್ದಾರೆ. ಕಾನೂನು ಬಾಹಿರ ಕೃತ್ಯ ಎಸಗಿದ್ದರೆ ನನ್ನ ವಿರುದ್ಧ ಕ್ರಮ ಜರುಗಿಸಲಿ ಎಂದು ಸವಾಲೆಸೆದರು.

ನನ್ನ ಮೇಲಿನ ಆರೋಪ ಕುರಿತು ಅಧಿಕಾರಿಗಳು ಸೂಕ್ತ ತನಿಖೆ ನಡೆಸಿ ಸತ್ಯಾಸತ್ಯತೆ ಬಹಿರಂಗಪಡಿಸಬೇಕು. ಸುಳ್ಳು ಆರೋಪ ಮಾಡಿರುವ ಇಂಜಿನೀಯರ್ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಿಕಾಸ್, ಮಧು, ಖಾದರ್ ಇದ್ದರು.

## ಅಕ್ರಮ ಗಣಿಗಾರಿಕೆಯಿಂದಾಗಿರುವ ನಷ್ಟದ ವರದಿ ನೀಡಿ: ಸುಪ್ರೀಂ

• ಪ್ರಜೋದಯ ವರದಿ



**ನವದೆಹಲಿ:** ಕರ್ನಾಟಕದ ಬಳ್ಳಾರಿ ಹಾಗು ಆಂಧ್ರ ಪ್ರದೇಶದ ಗಡಿ ಭಾಗದಲ್ಲಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ಅಂದಾಜು ನಷ್ಟದ ಬಗ್ಗೆ ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಮೂರ್ತಿ ಸುಧಾಂಶು ಧುಲಿಯಾ ನೇತೃತ್ವದ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಓಬಳಾಪುರಂ ಗಣಿ ಕಂಪನಿಯ (ಓಎಂಸಿ) ಗಣಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿ ಗುತ್ತಿಗೆಗೆ ಪಡೆದ ಪ್ರದೇಶಗಳು ಮತ್ತು ಮೀಸಲು ಅರಣ್ಯ ಪ್ರದೇಶಗಳ ಗಡಿಗಳನ್ನು ಗುರುತಿಸಿ ವರದಿ ಸಲ್ಲಿಸಲು ಸಮಿತಿಗೆ ಸುಪ್ರೀಂ ಕೋರ್ಟ್ ಆರು ವಾರಗಳ ಕಾಲಾವಕಾಶ ನೀಡಿದೆ.

ಓಎಂಸಿ ಗಣಿ ಅಕ್ರಮ ಪ್ರಕರಣದಲ್ಲಿ ವಿವಿಧ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರ ಪೀಠವು ಈ ನಿರ್ದೇಶನ ನೀಡಿದೆ. ಮೀಸಲು ಅರಣ್ಯ ಪ್ರದೇಶ ಅತಿಕ್ರಮಣವಾಗಿದೆಯೇ. ಆಗಿದ್ದರೆ ಯಾರಿಂದ. ಗಣಿ ಗುತ್ತಿಗೆ ಪಡೆದ ಪ್ರದೇಶದ ಗಡಿಗಳು ಮೀಸಲು ಅರಣ್ಯ ಪ್ರದೇಶ ಗಳನ್ನು ಅತಿಕ್ರಮಣ ಮಾಡಿದೆಯೇ. ಅಕ್ರಮ ಗಣಿಗಾರಿಕೆ ಅಥವಾ ಇತರ ಅನಧಿಕೃತ ಚಟುವಟಿಕೆಗಳ ಪ್ರಮಾಣ ಎಷ್ಟು ಎಂಬುದರ ಕುರಿತು ಬೆಳಕು ಚೆಲ್ಲುವಂತೆ ಸಮಿತಿಗೆ ನ್ಯಾಯಪೀಠ ಸೂಚನೆ ನೀಡಿದೆ. ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಅಂತರ–ರಾಜ್ಯ ಗಡಿ ವಿವಾದದ ಪರಿಣಾಮವಾಗಿ, ಗಣಿಗಾರಿಕೆ ಚಟುವಟಿಕೆಗಳನ್ನು 2010ರಲ್ಲಿ ನಿಷೇಧಿಸಲಾಗಿತ್ತು. ಅದಾದ ಬಳಿಕವೂ, ವಿವಿಧ ಸ್ಥಳಗಳಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಅನಧಿಕೃತ ಚಟುವಟಿಕೆಗಳು ನಿರಂತರವಾಗಿ ಮುಂದುವರಿದಿವೆ. ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿದೆ. ಆದರೆ, ತನಿಖೆಯಿಂದ ನಿರ್ದಿಷ್ಟ ಫಲಿತಾಂಶ ಹೊರಬಂದಿಲ್ಲವೆಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ಧುಲಿಯಾ ನೇತೃತ್ವದ ಸಮಿತಿಯನ್ನು 2025ರ ಸೆಪ್ಟೆಂಬರ್‌ನಲ್ಲಿ ರಚಿಸಿದ್ದ ಸುಪ್ರೀಂ ಕೋರ್ಟ್ ವರದಿ ಸಲ್ಲಿಕೆಗೆ ಮೂರು ತಿಂಗಳ ಕಾಲಾವಕಾಶ ನೀಡಿತ್ತು. ಆಂಧ್ರಪ್ರದೇಶ ದಲ್ಲಿರುವ ಓಬಳಾಪುರಂ ಗಣಿ ಕಂಪನಿಯ ಗಣಿ ಗುತ್ತಿಗೆ ಪ್ರದೇಶಗಳನ್ನು ಖರೀದಿಸಿದ್ದ ರಾಜ್ಯದ ಆಗಿನ ಸಚಿವ ಜಿ.ಜನಾರ್ಧನ ರೆಡ್ಡಿ ಕುಟುಂಬ, ಅಂತರ ರಾಜ್ಯ ಗಡಿ ಗುರುತುಗಳನ್ನೇ ಸ್ಫೋಟಿಸಿ, ರಾಜ್ಯದ ಭೂಪ್ರದೇಶವನ್ನು ಅತಿಕ್ರಮಿಸಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ 2007ರಲ್ಲಿ ಕೇಳಿಬಂದಿತ್ತು.

ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಹಿಂದಿನ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಅವರು ವರದಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಆದೇಶದಂತೆ ತನಿಖೆ ನಡೆಸಿದ್ದ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಅಕ್ರಮ ಗಣಿಗಾರಿಕೆಯಿಂದ ಅಂತರ ರಾಜ್ಯ ಗಡಿ ಗುರುತು ಗಳು ನಾಶವಾಗಿರುವುದನ್ನು ದೃಢಪಡಿಸಿತ್ತು.

## ಕ್ಷುಲ್ಲಕ ಕಾರಣಕ್ಕೆ ಚಾಕುವಿನಿಂದ ಇರಿತ

• ಪ್ರಜೋದಯ ವರದಿ

**ಹಾಸನ:** ಕ್ಷುಲ್ಲಕ ವಿಚಾರಕ್ಕೆ ಶುರುವಾದ ಯುವಕರ ಜಗಳ ವಿಕೋಪಕ್ಕೆ ತಿರುಗಿದ್ದು ಮೂವರಿಗೆ ಚಾಕುವಿನಿಂದ ಇರಿದಿರುವ ಘಟನೆ ತಾಲ್ಲೂಕಿನ ಬೀಕನಹಳ್ಳಿಯ ಪುರದಮ್ಮ ದೇವಸ್ಥಾನ ಸಮೀಪ ನಡೆದಿದೆ.

ದುದ್ದ ಹೋಬಳಿ ಅನುಗವಳ್ಳಿ ಗ್ರಾಮದ ಪ್ರಜ್ವಲ್ ಹಾಗು ಗೋವಿಂದ ಗಾಯಗೊಂಡವರು. ಹಾಸನ ಅಂಬೇಡ್ಕರ್ ನಗರದ ಅಮಿತ್ ಮತ್ತು ಆದಿತ್ಯ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಮಾ.10 ರಂದು ಬೀಗರ ಊಟಕ್ಕೆಂದು ತೆರಳಿದಾಗ ಗಲಾಟೆ ಶುರುವಾಗಿದೆ. ಅಮಿತ್ ಮತ್ತು ಆದಿತ್ಯ ಇಬ್ಬರು ಒಟ್ಟಾಗಿ ಗೋವಿಂದನ ಕುರಿತು ಹಗುರವಾಗಿ ಮಾತನಾಡಿದ್ದಾರೆ. ಆಗ ಪ್ರಜ್ವಲ್ ಮಧ್ಯ ಪ್ರವೇಶಿಸಿದ್ದಕ್ಕೆ ಅಮಿತ್ ತನ್ನ ಕೈಯಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ಇರಿದಿದ್ದಾನೆ. ಆದಿತ್ಯನು ಕೈಯಿಂದ ಮುಖಕ್ಕೆ ಗುದ್ದಿದ್ದಾನೆ. ಪಕ್ಕದಲ್ಲೇ ಇದ್ದ ಗೋವಿಂದ ಹಾಗು ದೇವರಾಜು ಎಂಬು ವವರಿಗೆ ಅಮಿತ್ ಚಾಕುವಿನಿಂದ ಬಲಗೈಗೆ ಚುಚ್ಚಿದ್ದಾನೆ ಎನ್ನಲಾಗಿದೆ. ಗಾಯಾಳುಗಳು ಹಿಮ್ಸ್ ನಲ್ಲಿ ಚಿಕಿತ್ಸೆಗೆ ದಾಖಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಾಗಿ ಖರೀದಿಯಲ್ಲಿ ಅಕ್ರಮ ಎಸಗಿದರೆ ನಿರ್ದಾಕ್ಷಿಣ್ಯ ಕ್ರಮ

» ಮೊದಲನೇ ಪುಟದಿಂದ

ಹಾವಳಿ ಹೆಚ್ಚಾಗಿದೆ. ಹಣ ನೀಡಿದರೆ ಮೊದಲು ಆದ್ಯತೆ ಮೇಲೆ ರಾಗಿ ಪಡೆಯುತ್ತಾರೆಂದು ವರದಿಯಾಗಿದೆ. ಅದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಪ್ರತಿ ತಾಲ್ಲೂಕುಗಳಲ್ಲಿ ತಹಶೀಲ್ದಾರ್‌ಗಳು ಮೇಲುಸ್ತುವಾರಿ ಮಾಡಬೇಕು. ರೈತರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಮಳೆ ಬರುವ ಸಾಧ್ಯತೆ ಇದ್ದರೆ ಟಾರ್ಪಲ್ ವ್ಯವಸ್ಥೆ ಮಾಡಬೇಕು. ರೈತರ ವಾಹನದಿಂದ ರಾಗಿ ಇಳಿಸಲು ಹೆಚ್ಚಿನ ಹಣವನ್ನು ಪಡೆಯುತ್ತಿದ್ದಾರೆ ಎಂಬ ಆರೋಪ ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಅವರು ಮಾತನಾಡಿ, ಚನ್ನರಾಯ ಪಟ್ಟಣ ತಾಲ್ಲೂಕಿನ ನುಗ್ಗೆಹಳ್ಳಿ ಹಾಗು ಬಾಗೂರು ಖರೀದಿ ಕೇಂದ್ರಗಳಿಗೆ ಭೇಟಿ ನೀಡಿದ್ದು, ರೈತರಿಗೆ ಉಂಟಾಗುತ್ತಿರುವ ಸಮಸ್ಯೆಗಳ ಕುರಿತು ಕೂಡಲೇ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಅರುಣ್ ಕುಮಾರ್ ಸಂಗಾವಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಗಲ್ಫ್‌ನಲ್ಲಿರುವ ಭಾರತೀಯರಿಗೆ ಪ್ರಧಾನಿ ಮೋದಿ ಸಹಾಯದ ಭರವಸೆ

**ಕೊಚ್ಚಿ:** ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮ ಗಲ್ಫ್ ರಾಷ್ಟ್ರಗಳಲ್ಲಿ ಸಿಲುಕಿರುವ ಕೇರಳಿಗರಿಗೆ ಧೈರ್ಯ ತುಂಬಲು ಯತ್ನಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸರ್ಕಾರವು ವಿದೇಶದಲ್ಲಿರುವ ಭಾರತೀಯರೊಂದಿಗೆ ದೃಢವಾಗಿ ನಿಲ್ಲುತ್ತದೆಂದು ಬುಧವಾರ ಭರವಸೆ ನೀಡಿದರು. ಮುಂಬರುವ ವಿಧಾನಸಭಾ ಚುನಾವಣೆ ಹಿನ್ನಲೆಯಲ್ಲಿ ಬುಧವಾರ ಕೊಚ್ಚಿಯ ಜವಾಹರಲಾಲ್ ನೆಹರು ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಎನ್‌ಡಿಎ ಸಮಾವೇಶ ಉದ್ದೇಶಿಸಿ ಮಾತನಾಡಿದ ಮೋದಿ, ಗಲ್ಫ್‌ನಲ್ಲಿರುವ ದೊಡ್ಡ ಮಲಯಾಳಿ ವಲಸಿಗರನ್ನು ಉಲ್ಲೇಖಿಸಿ, ಪಶ್ಚಿಮ ಏಷ್ಯಾದಲ್ಲಿನ ಪರಿಸ್ಥಿತಿಯು ಕೇರಳದಲ್ಲಿರುವ ಕುಟುಂಬಗಳಲ್ಲಿ ತೀವ್ರ ಆತಂಕ ಉಂಟು ಮಾಡಿದೆ ಎಂದರು.

**ನಾಗೇಶ್ ಶಿಕ್ಷಣ ಸಂಸ್ಥೆಯ ಪದವಿ ಪ್ರದಾನ ಸಮಾರಂಭ | ಹಿಮ್ಸ್ ನಿರ್ದೇಶಕ ರಾಜಣ್ಣ ಉದ್ಘಾಟನೆ**

# ಆರೋಗ್ಯ ಕ್ಷೇತ್ರದಲ್ಲಿ ಶುಶ್ರೂಷಕರ ಪಾತ್ರ ಮಹತ್ವದ್ದು

• ಪ್ರಜೋದಯ ವರದಿ




**ಚನ್ನರಾಯಪಟ್ಟಣ:** ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಶುಶ್ರೂಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆಂದು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ|| ಬಿ. ರಾಜಣ್ಣ ಅವರು ತಿಳಿಸಿದರು.

ಪಟ್ಟಣದ ಜ್ಞಾನಸಾಗರ ವಿದ್ಯಾಸಂಸ್ಥೆ ಆವರಣದಲ್ಲಿ ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ನಾಗೇಶ್ ಆರೋಗ್ಯ ಮತ್ತು ಅರೆವೈದ್ಯಕೀಯ ವಿಜ್ಞಾನ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಬಿಎಸ್‌ಸಿ ನರ್ಸಿಂಗ್, ಜಿಎನ್‌ಎಂ ಹಾಗು ಅರೆ ವೈದ್ಯಕೀಯ ವಿದ್ಯಾರ್ಥಿಗಳ ದೀಪ ಪ್ರಜ್ವಲನ, ಪ್ರತಿಜ್ಞಾ ವಿಧಿ ಸ್ವೀಕಾರ, ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶುಶ್ರೂಷಕರ ಹುದ್ದೆ ಪವಿತ್ರವಾದದ್ದು. ವೈದ್ಯರು ಜೀವ ಉಳಿಸುವ ಕಾರ್ಯ ಮಾಡುವ ಸಂದರ್ಭದಲ್ಲಿ ಶುಶ್ರೂಷಕರು ಉತ್ತಮ ಸಹಾಯಕರಾಗಿ ಕೆಲಸ ಮಾಡಬೇಕಿದೆ. ಶುಶ್ರೂಷಕರಿಗೆ ತಾಯ್ತನ, ಕರುಣೆ, ಮಮತೆ, ಸಹನೆ ಮತ್ತು ತಾಳ್ಮೆ ಎಲ್ಲವೂ ಇರಬೇಕು. ರೋಗಿಗಳನ್ನು ತಾಳ್ಮೆಯಿಂದ ಪರಿಶೀಲಿಸಿ ಜೀವ ಉಳಿಸುವ ಕೆಲಸ ಮಾಡಬೇಕು. ವೃತ್ತಿಯಲ್ಲಿ ಮುಖ್ಯವಾಗಿ ನಿಸ್ವಾರ್ಥ ಸೇವೆಯ ಮನೋಭಾವ ಬರಬೇಕಿದೆ. ಶುಶ್ರೂಷಕರ ಶಾಲೆಯ ವಿದ್ಯಾರ್ಥಿಗಳು ನೆಂಟಿಗೇಲ್ ತರಹ ಸೇವೆ ಮಾಡಬೇಕು. ರೋಗಿಯ ಚಿಕಿತ್ಸೆಯಲ್ಲಿ ಅರೆವೈದ್ಯಕೀಯ ಸಿಬ್ಬಂದಿಯೂ ಮುಖ್ಯವೆಂದರು.

ಅಧ್ಯಕ್ಷತೆ ವಹಿಸಿದ್ದ ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ|| ಕೆ.ನಾಗೇಶ್ ಅವರು ಮಾತನಾಡಿ, ತರಬೇತಿ ಪಡೆದ ದಾದಿ ಮನುಕುಲಕ್ಕೆ ದೊರೆತ ವರದಾನ. ದಾದಿಯರು ಆರೋಗ್ಯ ಸೇವೆ ಉದ್ಯಮದ ಬೆನ್ನೆಲುಬು. ಅವರ ತ್ವರಿತ ಚಿಂತನೆ ಮತ್ತು ನಿರ್ಣಾಯಕ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದಿಂದ ತುರ್ತು ಸಂದರ್ಭಗಳಲ್ಲಿ ಮುಂಚೂಣಿಯ ಪ್ರತಿಕ್ರಿಯೆಗಳನ್ನು ಒದಗಿಸುವಲ್ಲಿ ಅವರು ನಿರ್ಣಾಯಕರಾಗಿದ್ದಾರೆ. ನರ್ಸ್‌ಗಳು ಸಮಾಜದಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಿದ್ದು, ಮಾನವೀಯತೆಯ ಸಂಕೇತವಾಗಿದ್ದಾರೆ. ವೃತ್ತಿಯಲ್ಲಿ ನಿಷ್ಠೆ ಮತ್ತು ವಿಶ್ವಾಸವನ್ನು ಕಾಪಾಡಿಕೊಂಡು ಕಾರ್ಯನಿರ್ವಹಿಸಬೇಕೆಂದರು.

ಭಾರತದಲ್ಲಿ ನರ್ಸಿಂಗ್ ಕ್ಷೇತ್ರವು ದೊಡ್ಡ ಮಟ್ಟದಲ್ಲಿ ಬೆಳವಣಿಗೆ ಕಂಡಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಜ್ಞಾನ ಅಗತ್ಯವಾಗಿದೆ. ನರ್ಸ್‌ಗಳು ಜ್ಞಾನ ಹೆಚ್ಚಿಸಿಕೊಳ್ಳಬೇಕು. ಸಮಾಜಕ್ಕೆ ಯಾವ ರೀತಿಯ ಕೊಡುಗೆ ನೀಡುತ್ತೇವೆಂಬುದೇ ಮುಖ್ಯ. ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡಬಹುದು. ಮಾನಸಿಕ ಸ್ಥೈರ್ಯ ತುಂಬಿ ರೋಗಿಯನ್ನು ಸಂಪೂರ್ಣ ಗುಣಮುಖ ಮಾಡುವ ಜವಾಬ್ದಾರಿ ಅರೆವೈದ್ಯಕೀಯ ಸಿಬ್ಬಂದಿ ಹೊಂದಿರುತ್ತಾರೆಂದರು.

ಶಿಕ್ಷಣವು ವ್ಯಕ್ತಿಯ ಬದುಕಿಗೆ ಉತ್ತರವಾಗಬೇಕೆ ಹೊರತು ಪ್ರಶ್ನೆಯಾಗಿರಬಾರದು. ಶಿಕ್ಷಣ ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು. ವೃತ್ತಿ ಶಿಕ್ಷಣ ಕೋರ್ಸ್‌ಗಳು ದುಡ್ಡು ಸಂಪಾದನೆಗೆ ಮಾತ್ರ ಸೀಮಿತಗೊಳ್ಳದೆ, ಸಾಧನೆ ಮತ್ತು ಕೊಡುಗೆಗಳನ್ನು ನೀಡುವ ಗುರಿಯೊಂದಿಗೆ ವಿದ್ಯಾರ್ಥಿಗಳನ್ನು ಬೆಳೆಸುತ್ತದೆಂದರು.

ಪ್ರಸ್ತುತ ದಿನಗಳಲ್ಲಿ ಲಕ್ಷಾಂತರ ದಾದಿಯರ ಅವಶ್ಯಕತೆ ಇದೆ. ವಿದ್ಯಾರ್ಥಿಗಳು ಈ ಕೋರ್ಸ್ ಆಯ್ಕೆ ಮಾಡಿಕೊಂಡಿರುವುದು ಸಂತಸದ ವಿಚಾರ. 2003ರಲ್ಲಿ 50 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಸಂಸ್ಥೆ ಈಗ ಸಾವಿರಾರು ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪವಾಗಿದೆ. ನಾಗೇಶ್ ಶಿಕ್ಷಣ ಸಂಸ್ಥೆ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯಿಂದಲೂ ಉತ್ತೇ ಜಿಸಿ ಉತ್ತಮ ಶಿಕ್ಷಣ ನೀಡುತ್ತಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ತಾವು ಆಯ್ದುಕೊಂಡಿರುವ ಕ್ಷೇತ್ರದ ಪಾವಿತ್ರ್ಯ ಹಾಗು ಜವಾಬ್ದಾರಿ ಅರಿತು ಶಿಕ್ಷಣ ಪೂರ್ಣಗೊಳಿಸಿದರೆ ನಾಡಿಗೆ ಉತ್ತಮ ಹಾಗು ಮಾದರಿ ದಾದಿಯರ ಕೊಡುಗೆಯಾಗು ತ್ತದೆಂದರು.

ನಾಗೇಶ್ ಸಮೂಹ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ|| ಭಾರತಿ ನಾಗೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನರ್ಸಿಂಗ್ ಕಾಲೇಜ್ ಮಾಜಿ ಪ್ರಾಂಶುಪಾಲೆ ಎ.ಬಿ.ಪುಷ್ಪಲತಾ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ವಾರ್ಷಿಕ ವರದಿಯನ್ನು ಪ್ರಾಂಶುಪಾಲೆ ಆರ್.ಜೆ.ವಿದ್ಯಾರಾಣಿ ಮಂಡಿಸಿದರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ|| ಬಿ.ಆರ್. ಯುವರಾಜ್, ಸಂಸ್ಥೆಯ ಡೀನ್ ಡಾ|| ಸುಜಾ ಫಿಲಿಪ್, ಆಡಳಿತಾಧಿಕಾರಿ ಫಿಲಿಪ್, ನಿರ್ದೇಶಕರಾದ ಲಕ್ಷ್ಮೇಗೌಡ, ನಾರಾಯಣ್ ಇತರರಿದ್ದರು.

**ತಕ್ಷಣ ಬೇಕಾಗಿದ್ದಾರೆ**

ಹಾಸನ ನಗರದ ಪಿ.ಜಿ. ಹಾಸ್ಟೆಲ್‌ಗೆ ಅಡುಗೆ ಭಟ್ಟರು, ಅಡುಗೆ ಸಹಾಯಕಿಯರು ಹಾಗು ಸಹಾಯಕರು ಬೇಕಾಗಿದ್ದಾರೆ.

ಸಂಪರ್ಕಿಸಿ
8453589228
8892104374

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019